ದೆಹಲಿ ಕರ್ನಾಟಕ ಸಂಘದ

# ಅಭಿಮತ

ಸೆಪ್ಟೆಂಬರ್ 2021
ಬೆಲೆ ರೂ. 1




ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದ ಸುಹಾಸ್ ಯತಿರಾಜ್



## ಗಣೇಶ ಹಬ್ಬದ ಶುಭಾಶಯಗಳು

# ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದ ಕನ್ನಡಿಗ ಸುಹಾಸ್ ಯತಿರಾಜ್

ಟೋಕಿಯೊದಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್ ನಲ್ಲಿ ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್ ಎಸ್.ಎಲ್ .4 ವಿಭಾಗದಲ್ಲಿ ಭಾರತದ ಸುಹಾಸ್ ಎಲ್. ಯತಿರಾಜು ಬೆಳ್ಳಿ ಪದಕ ಗಳಿಸಿದ್ದಾರೆ. ಚಿನ್ನದ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಫ್ರಾನ್ಸ್‌ನ ಲುಕಾಸ್ ಮಜೂರ್ ವಿರುದ್ಧ ಸೋತಿದ್ದರು. ಸೆಮಿ ಫೈನಲ್‌ನಲ್ಲಿ ಸುಹಾಸ್ ಇಂಡೋನೇಷ್ಯಾದ ಫ್ರೆಡಿ ಸೆಟಿಯಾವನ್ ವಿರುದ್ಧ 21–9, 21–15ರ ಅಂತರದಲ್ಲಿ ಗೆದ್ದಿದ್ದರು.

ಕನ್ನಡಿಗ ಸುಹಾಸ್ ಯತಿರಾಜು ಅವರು ನೋಯ್ಡಾದ ಜಿಲ್ಲಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಐಎಎಸ್ ಅಧಿಕಾರಿ ಸುಹಾಸ್ ಹಾಸನದಲ್ಲಿ ಜನಿಸಿದ್ದು, ಇಂಜಿನಿಯರಿಂಗ್ ಪದವಿ ಗಳಿಸಿದ್ದಾರೆ. ಈ ಹಿಂದೆ ಪ್ರಯಾಗ್ ರಾಜ್, ಆಗ್ರಾ, ಅಝುಮ್ ಗಢ, ಜೌನ್‌ಪುರ್, ಸೋನ್ ಭದ್ರಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

ಸುಹಾಸ್ ಯತಿರಾಜ್ ಅವರ ಗೆಲುವಿಗೆ ರಾಷ್ಟ್ರಪತಿ, ಪ್ರಧಾನಿ, ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ ಶುಭಾಶಯಗಳು ಹರಿದುಬರುತ್ತಿವೆ. ಕ್ರೀಡಾ ಸಾಧನೆ ಮೂಲಕ ನಮ್ಮ ಇಡೀ ದೇಶದ ಕಲ್ಪನೆಯನ್ನು ಸುಹಾಸ್ ಯತಿರಾಜು ಹಿಡಿದಿಟ್ಟಿದ್ದಾರೆ. ಪ್ಯಾರಾಲಿಂಪಿಕ್‌ನಲ್ಲಿ ಬೆಳ್ಳಿ ಗೆದ್ದ ಅವರಿಗೆ ಅಭಿನಂದನೆಗಳು ಎಂದು ಪ್ರಧಾನಿ ಹೇಳಿದ್ದಾರೆ. ಆಡಳಿತ ಸೇವೆ ಮತ್ತು ಕ್ರೀಡೆ ಎರಡೂ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮೆರೆದ ಸುಹಾಸ್ ಯತಿರಾಜ್ ಅವರು ಕನ್ನಡಿಗರು ಎಂಬುದು ನಮಗೆ ಹೆಮ್ಮೆಯ ಸಂಗತಿ ಎಂದು ಮುಖ್ಯಮಂತ್ರಿ



ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದ ಕನ್ನಡಿಗ ಸುಹಾಸ್ ಯತಿರಾಜ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

# ಗಣೇಶನಿಗೆ ಕಲಾ ನಮನ

ಬಹುಮುಖ ಪ್ರತಿಭೆಯ ದೆಹಲಿಯ ಹಿರಿಯ ಕನ್ನಡಿಗ ಚೆನ್ನು ಎಸ್. ಮಠದ್ ಅವರ ಗಣೇಶನ ಕಲಾಕೃತಿ ಈ ಬಾರಿಯ ಮುಖಪುಟ ಚಿತ್ರದಲ್ಲಿ ಮೂಡಿ ಬಂದಿದೆ. ಪರಿಸರ ಹಿತವನ್ನು ಗಮನದಲ್ಲಿರಿಸಿ ಮಠದ್ ಅವರು ಪ್ರತಿ ವರ್ಷ ಮಣ್ಣಿನ ಗಣೇಶನ ಮೂರ್ತಿಯನ್ನು ರಚಿಸುತ್ತಾರೆ. ಈ ಮೂಲಕ ಗಣೇಶನಿಗೆ ಕಲಾ ನಮನ ಸಲ್ಲಿಸುವ ಪರಿ ವಿಶಿಷ್ಟವಾದದ್ದು. ಇದನ್ನು ಅವರು ಕಳೆದ 54 ವರ್ಷಗಳಿಂದ ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ.

ಹಲವು ರೇಖಾಚಿತ್ರಗಳನ್ನು ರಚಿಸಿರುವ ಮಠದ್ ಅವರ ಕೆಲವು ಚಿತ್ರಗಳು ಇಲ್ಲಿವೆ. ರಂಗಭೂಮಿ, ಕಲೆ ಸೇರಿದಂತೆ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಚೆನ್ನು ಎಸ್. ಮಠದ್ ಅವರಿಗೆ ನಮ್ಮ ಅಭಿನಂದನೆಗಳು ಮತ್ತು ಹಾರ್ದಿಕ ಶುಭಾಶಯಗಳು.

*ಡಾ. ಅವನೀಂದ್ರನಾಥ್ ರಾವ್*



ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಅನಂತರಾಮು ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ



ಸಂಪುಟ 31 । ಸಂಚಿಕೆ 12
ಸೆಪ್ಟೆಂಬರ್ 2021


# ಸಂಪಾದಕೀಯ

## ಸಂವಾದರಹಿತ ಶಿಕ್ಷಣ ಆತಂಕಕಾರಿ

ಡಿಜಿಟಲ್ ಶಿಕ್ಷಣಕ್ಕೆ ಈಚೆಗೆ ಹೆಚ್ಚಿನ ಒಲವು ವ್ಯಕ್ತವಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ವೈರಾಣು ತಂದ ಜಾಗತಿಕ ವಿಪತ್ತು ಶಿಕ್ಷಣ ಕ್ಷೇತ್ರದಲ್ಲಿ ಆನ್‌ಲೈನ್ ಕಲಿಕೆಯನ್ನು ಅನಿವಾರ್ಯಗೊಳಿಸಿದೆ. ಒಂದೊಮ್ಮೆ ಮುಂದಿನ ದಿನಗಳಲ್ಲಿ ಆನ್‌ಲೈನ್ ಕಲಿಕೆಗೆ ಹೆಚ್ಚಿನ ಪ್ರಾಶಸ್ತ್ಯ ದೊರೆತರೆ ತಜ್ಞರು ಈ ಕುರಿತ ಸಾಧಕ ಬಾಧಕಗಳ ಕುರಿತು ಚಿಂತನೆ ನಡೆಸಬೇಕಾಗಿದೆ.

ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಹೆಚ್ಚಿನ ಪ್ರಮಾಣದಲ್ಲಿ ಅಳವಡಿಸಿಕೊಂಡ ಕಾರಣ ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಸಲಕರಣೆಗಳೊಂದಿಗೆ ಮನೆಯಲ್ಲೇ ಕುಳಿತು ಕಲಿಕೆಯನ್ನು ಮುಂದುವರಿಸಿದ್ದಾರೆ. ಈ ಬದಲಾದ ಪರಿಸ್ಥಿತಿಯು ಭೌಗೋಳಿಕ ಸೀಮೆಯನ್ನು ದಾಟಿ ವಿದ್ಯಾರ್ಥಿಯು ಶಿಕ್ಷಣವನ್ನು ಪಡೆಯಬಹುದು ಎಂಬುದನ್ನು ಸಾಬೀತುಪಡಿಸಿದೆ. ಕೇವಲ ಕಲಿಕೆ ಮಾತ್ರವಲ್ಲದೆ ಇಂದು ಪರೀಕ್ಷೆಗಳನ್ನೂ ಆನ್‌ಲೈನ್ ಮುಖಾಂತರವೇ ನಡೆಸಲಾಗುತ್ತಿದೆ. ಈ ವಿಪತ್ತಿನ ಸಂದರ್ಭದಲ್ಲಿ ಶಿಕ್ಷಕರನ್ನು ಮತ್ತು ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಈ ವ್ಯವಸ್ಥೆ ಅನುವು ಮಾಡಿಕೊಟ್ಟಿದೆ ಎನ್ನುವುದು ನಿಜ. ಆದರೆ ಈ ವ್ಯವಸ್ಥೆಯ ಇತಿಮಿತಿಗಳ ಬಗೆಗೆ ನಾವು ಗಮನಹರಿಸಬೇಕಾಗಿದೆ.

ಮುಖ್ಯವಾಗಿ ಡಿಜಿಟಲ್ ಶಿಕ್ಷಣವು ವಿದ್ಯಾರ್ಥಿಗಳನ್ನು ಸಾಮಾಜಿಕ ಸಂಬಂಧಗಳಿಂದ ದೂರವಿರಿಸಿದೆ. ಈ ವ್ಯವಸ್ಥೆ ಶಾಲೆಗೆ ಹೋಗುವ ಎಳೆಯ ಮಕ್ಕಳಿಂದ ತೊಡಗಿ ಕಾಲೇಜು ಓದುವ ಯುವಕ ಯುವತಿಯರವರೆಗೂ ಪರಸ್ಪರ ಮಾತುಕತೆ ಮತ್ತು ಚರ್ಚೆಗಳಿಂದ ದೂರವಿರಿಸಿದೆ. ಪಾರಂಪರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಗುರು ಮತ್ತು ಶಿಷ್ಯರು ಪರಸ್ಪರ ತಮ್ಮ ಸಂದೇಹಗಳ ಕುರಿತು ಮಾತನಾಡುತ್ತ ಪಠ್ಯಕ್ರಮಗಳ ಹೊರತಾಗಿಯೂ ಹೆಚ್ಚಿನ ಜ್ಞಾನ ಸಂಪಾದನೆ ಮಾಡಿಕೊಳ್ಳುತ್ತಿದ್ದರು. ಇದು ಆನ್‌ಲೈನ್ ತರಗತಿಗಳಲ್ಲಿ ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಈ ಬಗೆಯ ಸಂವಾದರಹಿತ ಶಿಕ್ಷಣ ಕ್ರಮ ಆತಂಕಕಾರಿಯಾಗಿದೆ.

ಈಚೆಗೆ ಪರೀಕ್ಷೆಗಳನ್ನೂ ಆನ್‌ಲೈನ್ ಮುಖಾಂತರವೇ ನಡೆಸಲಾಗುತ್ತಿದೆ. ಇಲ್ಲಿ ನಾಲ್ಕು ಆಯ್ಕೆಗಳಲ್ಲಿ ಒಂದನ್ನು ಆರಿಸಬೇಕು. ಈ ಕಾರಣದಿಂದ ಮಕ್ಕಳಲ್ಲಿ ವಿವರಿಸಿ ಬರೆಯುವ ಚಿಂತನೆಗೆ ಅವಕಾಶ ಇರುವುದಿಲ್ಲ. ಈ ಬಗೆಯ ಪರೀಕ್ಷಾ ಪದ್ಧತಿ ವಿದ್ಯಾರ್ಥಿಗಳ ಸೃಷ್ಟಿಶೀಲತೆಯನ್ನು ಕುಂಠಿತಗೊಳಿಸುವ ಅಪಾಯವಿದೆ.

ಆನ್‌ಲೈನ್ ಶಿಕ್ಷಣ ಪದ್ಧತಿಯ ಅಳವಡಿಕೆಯನ್ನು ಹೆಚ್ಚಾಗಿ ಅವಲಂಬಿಸುವ ಮತ್ತು ಈ ಕುರಿತ ಒಲವು ಸಮಕಾಲೀನ ಶಿಕ್ಷಕ ಸಮುದಾಯದ ಮೇಲೆ ಒತ್ತಡ ಮತ್ತು ಜವಾಬ್ದಾರಿಯನ್ನು ಹೆಚ್ಚಿಸಿದೆ. ವಿಷಯ ತಜ್ಞರಾಗಿದ್ದರೂ ಕೆಲವು ಶಿಕ್ಷಕರು ತಂತ್ರಜ್ಞಾನದ ಕಲಿಕೆಯಲ್ಲಿ ಹಿಂದುಳಿದ ಕಾರಣ ವಿದ್ಯಾರ್ಥಿಗಳ ಜೊತೆ ಯೋಗ್ಯ ಸಂವಹನ ನಡೆಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಮುಂದಿನ ದಿನಗಳಲ್ಲಿ ಶಿಕ್ಷಕರು ತಮ್ಮ ಕೌಶಲ್ಯವನ್ನು ಅಭಿವೃದ್ಧಿಗೊಳಿಸಬೇಕಾಗಿದೆ.

ಭಾರತ ದೇಶ ಗುರುಗಳೊಂದಿಗೆ ಶಿಷ್ಯರು ಒಂದೆಡೆ ವಾಸವಿದ್ದು ಶಿಕ್ಷಣವನ್ನು ಪಡೆಯುತ್ತಿದ್ದ ಗುರುಕುಲ ಕಲಿಕೆಯಿಂದ ತೊಡಗಿ ಇಂದು ಗುರು ಶಿಷ್ಯರು ಪರಸ್ಪರ ದೂರ ಇದ್ದು ಪರದೆಯ ಮೂಲಕ ಸಂಪರ್ಕ ಸಾಧಿಸಿ ಶಿಕ್ಷಣ ಪಡೆವ ಹಂತದವರೆಗೆ ಹಲವಾರು ಬದಲಾವಣೆಗಳನ್ನು ಕಂಡಿದೆ. ಆದರೆ ಶಿಕ್ಷಣದಲ್ಲಿ ತಂತ್ರಜ್ಞಾನದ ಅತಿಯಾದ ಅಳವಡಿಕೆ ಸೂಕ್ತವಲ್ಲ. ಈ ಕುರಿತ ಉನ್ನತ ಚಿಂತನೆ ಅಗತ್ಯ.

ಸೆಪ್ಟೆಂಬರ್ ತಿಂಗಳು ನಾವು ಶಿಕ್ಷಕರ ದಿನಾಚರಣೆಯನ್ನು ಆಚರಿಸುತ್ತೇವೆ. ಶಿಕ್ಷಣದ ಮೂಲಕ ಅತ್ಯುತ್ತಮ ಪ್ರಜೆಗಳನ್ನು ರೂಪಿಸುವ ಹೊಣೆಗಾರಿಕೆಯನ್ನು ಹೊಂದಿರುವ ಶಿಕ್ಷಕರಿಗೆ ಅಭಿನಂದನೆಗಳು ಮತ್ತು ಶುಭಾಶಯಗಳು.

ನಿಮಗೆಲ್ಲರಿಗೂ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 31 ಸಂಚಿಕೆ 12
ಸೆಪ್ಟೆಂಬರ್ 2021, ಬೆಲೆ ರೂ. 1



# ಸಂಘದ ಚುನಾವಣೆಯ ಸಂಭ್ರಮ

ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಚುನಾವಣೆಗಳನ್ನು ಅಕ್ಟೋಬರ ಮೂರನೇಯ ತಾರೀಖಿನಂದು ನಡೆಸುವುದೆಂದು ಕಾವಲು ಸಮಿತಿ ಮತ್ತು ಚುನಾವಣಾಧಿಕಾರಿಗಳು ಪ್ರಕಟಣೆ ಹೊರಡಿಸಿದ್ದಾರೆ. ಕಾವಲು ಸಮಿತಿಯ ಸದಸ್ಯರಾಗಿ ಶ್ರೀ ಅನಂತರಾಮ ಅರಳಿ, ಶ್ರೀ ಈಶ್ವರ ಮಡಿವಾಳ ಹಾಗೂ ಶ್ರೀ ಡಿ.ವಿ.ಎಸ್. ಮೂರ್ತಿಯವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರೆಲ್ಲರಿಗೂ ಈ ಕಠಿಣ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಸಂವಿಧಾನದ ಪ್ರಕಾರ ಆಡಳಿತ ಚುಕ್ಕಾಣಿ ಹಿಡಿದದ್ದಕ್ಕೆ ಕೃತಜ್ಞತೆಗಳು.

ಈಗಾಗಲೇ ನಾನು ಅಧ್ಯಕ್ಷನಾಗಿ ತಮಗೆಲ್ಲ ಏಪ್ರಿಲ್ 2021 ರಲ್ಲಿ ಬರೆದ ಪತ್ರದಲ್ಲಿ ನಮ್ಮ ಕಾರ್ಯಕಾರಿ ಸಮಿತಿಯ ಕಾಲಾವಧಿ ಮುಗಿದಿದ್ದರಿಂದ ಸಂಘದ ಸಂವಿಧಾನದ ಪ್ರಕಾರ ನಾವು ಕಾವಲು ಸಮಿತಿಯ ಉಸ್ತುವಾರಿಯಲ್ಲಿ ಕೆಲಸ ಮಾಡುತ್ತಿದ್ದೇವೆಂದು ತಿಳಿಸಿದ್ದೆ. ಕಾರ್ಯಕಾರಿ ಸಮಿತಿಯು 15 ಮಾರ್ಚ್ 2021 ರ ತನ್ನ ಸಭೆಯಲ್ಲಿ ಶ್ರೀ ಅನಂತರಾಮ ಅರಳಿಯವರನ್ನು ಚುನಾವಣಾಧಿಕಾರಿಗಳಾಗಿ ಆಯ್ಕೆ ಮಾಡಿತ್ತು. ಅವರು ಸಹ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸುವ ಮೂಲಕ ತಮ್ಮ ಕಾರ್ಯವನ್ನು ಪ್ರಾರಂಭಿಸಿದ್ದರು.

ಈ ವೇಳಾಪಟ್ಟಿಯ ಪ್ರಕಾರ ಚುನಾವಣಾ ಪ್ರಕ್ರಿಯೆಯೂ ಪ್ರಾರಂಭವಾಗಿ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿತ್ತು. 17 ಏಪ್ರಿಲ್ 2021 ಕ್ಕೆ ಸರ್ವ ಸದಸ್ಯರ ಸಭೆ ಮತ್ತು 24 ಏಪ್ರಿಲ್ 2021 ಕ್ಕೆ ಸಂಘದ ಚುನಾವಣೆಗಳನ್ನು ನಿಗಧಿತಗೊಳಿಸಲಾಗಿತ್ತು. ಆದರೆ, ಏಪ್ರಿಲ್ 2021 ರ ಮೊದಲವಾರದ ಹೊತ್ತಿಗೆ ಎರಡನೇಯ ಅಲೆಯ ಪ್ರಾರಂಭವಾದ ಕಾರಣ ಮತ್ತು ಸರಕಾರದ ನಿಯಮಾವಳಿಗಳ ಪ್ರಕಾರ ಈ ಎಲ್ಲ ಮೇಲಿನ ಪ್ರಕ್ರಿಯೆಗಳನ್ನು ಅನಿರ್ದಿಷ್ಟವಾಗಿ ಮುಂದೂಡಬೇಕಾಯಿತು. ಇವೆಲ್ಲವನ್ನೂ ನಾನು ಮತ್ತೊಮ್ಮೆ ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

ಈಗ ದೆಹಲಿ ಮತ್ತು ಎನ್.ಸಿ.ಆರ್. ಪ್ರದೇಶಗಳಲ್ಲಿ ಕೊರೊನಾದ ಪರಿಸ್ಥಿತಿ ಸಾಕಷ್ಟು ಸುಧಾರಿಸಿದ್ದು ಚುನಾವಣೆಗಳನ್ನು ನಡೆಸಲು ಸಾಧ್ಯವಾಗುತ್ತಿದೆಯೆಂಬ ಹಂಬಲಕ್ಕೆ ಎಡೆಮಾಡಿಕೊಟ್ಟಿದೆ. ಪೋಲಿಸ್ ಇಲಾಖೆಯಿಂದ ಕಾನೂನು ಮತ್ತು ಸುವ್ಯವಸ್ಥೆಗಳನ್ನು ಕಾಪಡುವ ನಿಟ್ಟಿನಲ್ಲಿ ಸಂಘದ ಚುನಾವಣೆಗಳನ್ನು ನಡೆಸಲು ಅನುಮತಿ ಸಿಕ್ಕಿದ್ದರೂ ಅದರಲ್ಲಿ ಕೋವಿಡ್ ಕುರಿತಾದ ಉಲ್ಲೇಖ ಅಸ್ಪಷ್ಟವಾಗಿದೆ. ಕೋವಿಡ್‌ನ ಎಲ್ಲ ನಿಯಮಾವಳಿಗಳನ್ನು ಪಾಲಿಸಿಕೊಂಡು ಚುನಾವಣೆಯನ್ನು ನಡೆಸಲು ಅವರು ಅನುಮತಿ ಕೊಟ್ಟಂತೆ ತೋರುತ್ತದೆ. ಆದರೆ, ಕೇಂದ್ರದ ಗ್ರಹ ಸಚಿವಾಲಯ ಮತ್ತು ಡೆಲ್ಲಿ ಡೈಸಾಸ್ಟರ ಮ್ಯಾನೇಜ್‌ಮೆಂಟ್ ಪ್ರಾಧಿಕಾರದ ಕೋವಿಡ್ ನಿಯಮಗಳನ್ನು ಇನ್ನೂ ಸಡಿಲ ಮಾಡಲಾಗಿಲ್ಲ. ಅವುಗಳನ್ನು ಇದ್ದ ರೀತಿಯಲ್ಲೇ ಸೆಪ್ಟೆಂಬರ್ 30 ರವರೆಗೆ ವಿಸ್ತರಿಸಲಾಗಿದೆ.

ಹೀಗಿದ್ದಾಗ ಕೋವಿಡ್ ಕುರಿತಾದ ಒಪ್ಪಿಗೆ ಸರಕಾರದಿಂದ ಪಡೆಯದೆ ಸಂಘದ ಚುನಾವಣೆಗಳನ್ನು ಮಾಡುವುದು ಎಷ್ಟು ಉಚಿತ ಎಂಬುದರ ಬಗ್ಗೆ ಇನ್ನೂ ಖಚಿತತೆ ಇಲ್ಲ. ಈ ಕುರಿತಾಗಿ ಕಾವಲು ಸಮಿತಿ ಹಾಗೂ ಚುನಾವಣಾಧಿಕಾರಿಗಳು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಜವಾಬ್ದಾರಿಯುನ್ನು ಹೊಂದಿದ್ದಾರೆ. ಈ ಕೆಲಸವನ್ನು ಅವರು ಉಸ್ತುವಾರಿ ಪದಾಧಿಕಾರಿಗಳೊಂದಿಗೆ ಮತ್ತು ಕಾರ್ಯಕಾರಿ ಸಮಿತಿಯ ಸಹಕಾರದೊಂದಿಗೆ ಮಾಡುತ್ತಿದ್ದಾರೆ. ಅದರಂತೆ ಅಕ್ಟೋಬರ್ 3 ನೇಯ ತಾರೀಖಿನಂದು ಚುನಾವಣೆ ನಡೆಯಲಿದೆ. ಬಹುಶಃ ಸಂಘದ ಆವರಣದಲ್ಲೇ ನಡೆಯಲಿದೆ. ದೆಹಲಿ ಕನ್ನಡ ಶಾಲೆಯಲ್ಲಿ ನಡೆಸಲು ಪರವಾನಿಗೆ ಸಿಕ್ಕರೆ ಅಲ್ಲೂ ಚುನಾವಣೆಗಳನ್ನು ನಡೆಸುವ ಬಗ್ಗೆ ಚುನಾವಣಾಧಿಕಾರಿಗಳು ನಿರ್ಧಾರ ಕೈಗೊಳ್ಳಬಹುದು. ಯಾವುದಕ್ಕೂ ಸರಕಾರದ ನಿಯಮಾವಳಿಗಳೆ ಅಂತಿಮ. ಅವುಗಳಲ್ಲಿ ಬದಲಾವಣೆಯಾಗಿದ್ದರೆ ನಾವು ಚುನಾವಣೆಯತ್ತ ಮುಂದುವರಿಯಬಹುದು.

ಸಂಘದ ದೆಹಲಿ ಮತ್ತು ಎನ್.ಸಿ.ಆರ್. ನಲ್ಲಿರುವ ಹಲವಾರು ಸದಸ್ಯರಿಗೆ, ಅದರಲ್ಲೂ ಹಿರಿಯ ಸದಸ್ಯರಿಗೆ ಚುನಾವಣೆಯಲ್ಲಿ ಭಾಗವಹಿಸಲು ಹಿಂಜರಿಕೆಯಿದೆ. ಎರಡನೇಯ ಅಲೆಯಲ್ಲಿ ನೊಂದ ಹಲವು ದೆಹಲಿ ಕನ್ನಡಿಗರಿಗೆ ಇನ್ನೂ ಅದರ ತಾಪದಿಂದ ಮಾನಸಿಕವಾಗಿ ಹೊರಬರಲು ಸಾಧ್ಯವಾಗುತ್ತಿಲ್ಲ. ಬಹುಶಃ ಇದಕ್ಕೆ ಕೆಲ ಕಾಲವೇ ಬೇಕಾಗಬಹುದು. ಮುಂಬರುವ ದಿನಗಳಲ್ಲಿ ಎಲ್ಲರಿಗೂ ಎರಡು ಡೋಸ್ ಲಸಿಕೆ ಸಿಕ್ಕರೆ ಹೆಚ್ಚಿನವರಲ್ಲಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಲ್ಲಿ ಉತ್ಸಾಹ ಮೂಡಬಹುದು. ಅದನ್ನು ನಾವೆಲ್ಲ ಆಶಿಸೋಣ.

ಈಗ ಸರ್ವಸದಸ್ಯರಿಗೆ ಸೂಚನೆಯನ್ನು ಕಳುಹಿಸಲು ದೆಹಲಿ ಕರ್ನಾಟಕ ಸಂಘ ಕಾರ್ಯನಿರತವಾಗಿದೆ. ಸೆಪ್ಟೆಂಬರ್ 26 ನೇಯ ತಾರೀಖು ಮಧ್ಯಾಹ್ನ 3.30 ಕ್ಕೆ ಸರ್ವಸದಸ್ಯರ ಸಭೆಯನ್ನು ಕರೆಯಲು ನಿರ್ಧರಿಸಲಾಗಿದೆ. ಈ ಚುನಾವಣೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿದ ಕಾರಣದಿಂದಾಗಿ ಎಲ್ಲ ಅಭ್ಯರ್ಥಿಗಳಿಗೆ ಮತ್ತೊಮ್ಮೆ ಹುರುಪು ಬಂದಂತಾಗಿದೆ. ಅವರೆಲ್ಲರೂ ಹಲವು ಬಗೆಗಳಲ್ಲಿ ಮತದಾರರನ್ನು ಸಂಪರ್ಕಿಸುವ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದಾರೆ.

ಆದರೆ, ಎಲ್ಲೋ ಅಡಗಿದಂತಿರುವ ಮೂರನೇಯ ಅಲೆಯ ಭೂತದ ನೆರಳು ನಮ್ಮನ್ನೆಲ್ಲ ಕಾಡುತ್ತಿದೆ. ಸದ್ಯದಲ್ಲಿ ಕೊರೊನಾದ ಪಿಡುಗು ಒಂದು ಬಗೆಯಲ್ಲಿ ನಿಯಂತ್ರಣದಲ್ಲಿ ಇದ್ದಂತೆ ತೋರುತ್ತಿದೆ. ದಕ್ಷಿಣದ ಕೇರಳ ಮತ್ತು ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಹೆಚ್ಚಿನ ಕೊರೊನಾದ ಕೇಸುಗಳು ಕಂಡು ಬರುತ್ತಿವೆ. ಆದರೆ, ಇದಾವುದು ಮೂರನೇಯ ಅಲೆಗೆ ಇನ್ನೂ ನಾಂದಿ ಹಾಡುವ ಪರಿಯಲ್ಲಿಲ್ಲವೆಂಬುದು ತಜ್ಞರ ಅಭಿಪ್ರಾಯವಾಗಿದೆ. ಅದು ನಿಜವಾಗಲಿ ಎಂದು ನಾವು ಹಾರೈಸಬೇಕಷ್ಟೆ.

ಸಂಘದ ಸಂವಿಧಾನಕ್ಕೆ 2012 ರಲ್ಲಿ ನಾನು ಮತ್ತು ನನ್ನ ಆಗಿನ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲ ಸೇರಿ ತಂದ ದೂರದರ್ಶಿ ತಿದ್ದುಪಡಿಯ ಕಾರಣದಿಂದಾಗಿ ಈ ಕೊರೊನಾ ಕಾಲದ ಚುನಾವಣೆಯ ಸಮಸ್ಯೆಗಳನ್ನು ನಾವು ಸುಲಲಿತವಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗಿದೆ. ಸಂಘದ ಚುನಾವಣೆಗಳು ಅದರ ಸಂವಿಧಾನದ ಅನ್ವಯ ನಡೆಯಲಿ ಎಂಬ ಒತ್ತಾಸೆ ನಮ್ಮೆಲ್ಲರದ್ದು. ಅದರೆ ದೆಹಲಿ ಮತ್ತು ಎನ್.ಸಿ.ಆರ್. ನಲ್ಲಿರುವ ಸಂಘದ ಸದಸ್ಯರು ಮಾತ್ರ ಮತದಾನಕ್ಕೆ ಅರ್ಹರು. ಇದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು.

ಈ ಎಲ್ಲ ಜಾಗರೂಕತೆಗಳ ಮತ್ತು ಕಟ್ಟುಪಾಡುಗಳನ್ನು ಪಾಲಿಸುವ ಮೂಲಕ, ಇನ್ನೂ ಮುಖ್ಯವಾಗಿ ಕೋವಿಡ್ ನಿಯಮಾವಳಿಗಳನ್ನು ಚಾಚೂತಪ್ಪದೆ ಪಾಲಿಸುವ ಮೂಲಕ ತಾವೆಲ್ಲರೂ ಸರ್ವಸದಸ್ಯರ ಮತ್ತು ಚುನಾವಣಾ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

*ಡಾ. ವೆಂಕಟಾಚಲ ಹೆಗಡೆ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ ನಮಸ್ಕಾರಗಳು.

ಈ ತಿಂಗಳಲ್ಲಿ ಸಾಲು ಸಾಲಾಗಿ ಹಬ್ಬಗಳು ಬರುತ್ತಿವೆ. ಜೊತೆಗೆ ಹಬ್ಬ ಗಣೇಶ ಚತುರ್ಥಿ ಇದೇ ಗುರುವಾರ ಮತ್ತು ಶುಕ್ರವಾರ ಇದೆ. ತಮಗೂ ತಮ್ಮ ಪರಿವಾರಕ್ಕೆ ಮತ್ತು ಸಮಸ್ತ ದೆಹಲಿ ಕನ್ನಡಿಗರಿಗೆ ಗೌರಿಗಣೇಶ ಹಬ್ಬದ ಶುಭಾಶಯಗಳನ್ನು ಕೋರುತ್ತಿದ್ದೇನೆ.

ದೆಹಲಿಯಲ್ಲಿ ಇತ್ತೀಚೆಗೆ ಅತ್ಯುತ್ತಮವಾಗಿ ಮಾರಕ ರೋಗ ಕೊರೊನಾವನ್ನು ನಿಯಂತ್ರಣ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಆದ ಕಾರಣ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಮಹಾಸಭೆ ಮತ್ತು ಚುನಾವಣೆ ನಡೆಯಬೇಕಿದ್ದು ಇದನ್ನು ಕಾನೂನು ಬದ್ಧವಾಗಿ ಮಾಡುತ್ತಿದ್ದೇವೆ. ಈಗಾಗಲೇ ಜಿಲ್ಲಾಡಳಿತದಿಂದ ಅನುಮತಿಯನ್ನು ಪಡೆದುಕೊಂಡಿದೆ. ಆದಕಾರಣ ಇದೇ ತಿಂಗಳು 26ರಂದು ವಾರ್ಷಿಕ ಮಹಾಸಭೆ ಮತ್ತು ಅಕ್ಟೋಬರ್ 3ರ ಭಾನುವಾರ ಚುನಾವಣೆ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಜರುಗಲಿದೆ. ದೆಹಲಿಯಲ್ಲಿರುವ ಎಲ್ಲಾ ಕನ್ನಡಿಗರು ಈ ಚುನಾವಣೆಯಲ್ಲಿ ಭಾಗವಹಿಸಿ ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘ ಎಂದಿನಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಹಿತ್ಯದ ಕಾರ್ಯಕ್ರಮಗಳು, ಇನ್ನೂ ಅನೇಕ ಸದಸ್ಯರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಆಯೋಜಿಸಲಿದೆ.

ಪ್ಯಾರಾಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ನಮ್ಮ ಕನ್ನಡದ ಕಣ್ಮಣಿ ಶ್ರೀ ಸುಹಾಸ್ ಐ.ಎ.ಎಸ್. ಅಧಿಕಾರಿಗಳು ಬೆಳ್ಳಿ ಪದಕ ಪಡೆದುಕೊಂಡು ಭಾರತಕ್ಕೆ ಘನತೆ ತಂದಿದ್ದಾರೆ. ಒಂದು ಹಳ್ಳಿಯಿಂದ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮುಗಿಸಿ ಉತ್ತಮ ಐ.ಎ.ಎಸ್. ಅಧಿಕಾರಿಗಳಾಗಿ, ಜಿಲ್ಲಾಧಿಕಾರಿಗಳಾಗಿ ಜತೆಗೆ ಇಂದು ಬೆಳ್ಳಿಯ ಪದಕಗಳನ್ನು ಬಾಚಿಕೊಂಡಿರುವ ನಮ್ಮ ಕನ್ನಡದ ಕಣ್ಮಣಿ ಶ್ರೀ ಸುಭಾಷ್‌ರವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭಾಶಯಗಳು ಮತ್ತು ಅಭಿನಂದನೆಗಳು. ಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಅವರೊಂದಿಗೆ ಅತ್ಯುತ್ತಮ ಕಾರ್ಯಕ್ರಮವನ್ನು ನಡೆಸಬೇಕಿದೆ. ಆ ಪ್ರಯತ್ನದಲ್ಲಿದ್ದೇವೆ. ಕೊರೊನಾ ಸಂದರ್ಭದಲ್ಲಿ ದೆಹಲಿ ಮತ್ತು ಎನ್.ಸಿ.ಆರ್. ನ ಕನ್ನಡಿಗರಿಗೆ ತುಂಬಾ ಸಹಾಯ ಹಸ್ತ ಚಾಚಿದ ಶ್ರೀ ಸುಹಾಸ್ ಅವರಿಗೆ ಮತ್ತೊಮ್ಮೆ ಶುಭಾಶಯಗಳನ್ನು ಕೋರುತ್ತಾ ಒಲಿಂಪಿಕ್ ಮತ್ತು ಪ್ಯಾರಾ ಒಲಿಂಪಿಕ್‌ನಲ್ಲಿ ಜಯಗಳಿಸಿದ ಎಲ್ಲಾ ಕ್ರೀಡಾಪಟುಗಳಿಗೆ ಮತ್ತೊಮ್ಮೆ ಶುಭಾಶಯಗಳು.

***ಸಿ.ಎಂ. ನಾಗರಾಜ***
*ಪ್ರಧಾನ ಕಾರ್ಯದರ್ಶಿ*

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜನ್ಮ ದಿನಾಚರಣೆ



ದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘವು ದಿನಾಂಕ 15.08.2021ರಂದು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜಯಂತಿಯನ್ನು ಆಚರಿಸಿತು.ಅವರ ಭಾವಚಿತ್ರವನ್ನು ನಮಿಸುತ್ತಾ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮವನ್ನು ಸರ್ಕಾರದ ಕೋವಿಡ್-19ರ ನಿಯಮಾವಳಿಯನ್ನು ಪಾಲಿಸಿಕೊಂಡು ನಡೆಸಲಾಯಿತು.

ದೆಹಲಿ ಕರ್ನಾಟಕ ಸಂಘದ ಅಧಕ್ಷ ಡಾ. ವೆಂಕಟಾಚಲ ಹೆಗಡೆಯವರು ಮಾತನಾಡಿ ಭಾರತ ಸ್ವಾತಂತ್ರ್ಯ ಹೋರಾಟದ ಮೊದಲನೇ ಕಿಡಿ ಹಚ್ಚಿದ ಕೀರ್ತಿಯು ಕಿತ್ತೂರಿನ ಸ್ವತಂತ್ರ ಹೋರಾಟಕ್ಕೆ ಸಲ್ಲುತ್ತದೆ ಮತ್ತು ಅದರಲ್ಲೂ ಈ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನವರ ಪಾತ್ರ ಬಹಳ ಮಹತ್ತರವಾದದ್ದು ಎಂದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಅಧ್ಯಕ್ಷ ಆರ್. ಮಹಾದೇವ್ ಹಾಗೂ ಶ್ರೀಮತಿ ಆಶಾಲತಾ, ಕಾರ್ಯದರ್ಶಿ ಎಸ್.ಡಿ. ಶ್ರೀನಿವಾಸ ಸೇರಿದಂತೆ ಇನ್ನೂ ಹಲವಾರು ಕನ್ನಡಿಗರು ಉಪಸ್ಥಿತರಿದ್ದರು.

ಸ್ವತಂತ್ರ ದಿನಾಚರಣೆಯ ದಿನದಂದೇ ಅವರ ಜನ್ಮದಿನ ಹಾಗೂ ಗಣರಾಜ್ಯೋತ್ಸವ ದಿನದಂದು ಹುತಾತ್ಮ ದಿನವಾಗಿ ಇರುವುದು ಕಾಕತಾಳೀಯವಾದರೂ ಅದರಲ್ಲಿ ದೇಶಭಕ್ತಿಯ ಸಂಕೇತವಾಗಿದೆ.

ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕಿತ್ತೂರಿನ ಸಂಗ್ರಾಮದ ಕುರಿತು ದಾಖಲಾತಿಗಳು ಇಲ್ಲದೇ ಇರುವುದು ಒಂದು ವಿಪರ್ಯಾಸ, ಈ ಕುರಿತು ಸಂಬಂಧ ಪಟ್ಟವರು ಮುಂದಿನ ಪೀಳಿಗೆಗೆ ಮಾಹಿತಿ ಮತ್ತು ಬರಹಗಳು ಸಿಗುವಂತೆ ಮಾಡಬೇಕಾಗಿ ವಿನಂತಿ.

***ಹರಿಪ್ರಿಯ ಎಸ್.***

# ಸ್ವಾತ್ರಂತ್ರ್ಯದ ಅಮೃತ ಮಹೋತ್ಸವ ಆಚರಣೆ



ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಧ್ವಜಾರೋಹಣ ಮಾಡಿ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಶ್ರಮಿಸಿದ ಹಾಗೂ ಅದಕ್ಕಾಗಿ ತಮ್ಮ ಪ್ರಾಣವನ್ನು ನೀಡಿದ ಎಲ್ಲರನ್ನು ಸ್ಮರಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಕೂಡಾ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲರನ್ನು ಈ ಸಂದರ್ಭದಲ್ಲಿ ಸ್ಮರಿಸಿದರು. ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಕೋಶಾಧಿಕಾರಿ ಶ್ರೀಮತಿ ಆಶಾಲತಾ ಎಂ., ಜಂಟಿ ಕಾರ್ಯದರ್ಶಿಗಳಾದ ರಾಧಾಕೃಷ್ಣ, ಶ್ರೀಮತಿ ಪೂಜಾ ರಾವ್ ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ. ಶಿವಪ್ಪ, ಶ್ರೀಮತಿ ಶೋಭಾ ಗೌಡ, ಶ್ರೀಮತಿ ಸವಿತಾ ನೆಲ್ಲಿ ಹಾಗೂ ದೆಹಲಿಯ ಕನ್ನಡಿಗರು ಈ ಸಂದರ್ಭದಲ್ಲಿ ಭಾಗವಹಿಸಿದರು.

ಸಂಜೆ 'ಸಂಗೀತ ಸಂಭ್ರಮ' ಫೇಸ್‌ಬುಕ್ ಲೈವ್ ಕಾರ್ಯಕ್ರಮವನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಆಯೋಜಿಸಲಾಗಿತ್ತು. ಶ್ರೀಮತಿ ಶುಭಾದೇವಿ ಪ್ರಸಾದ್, ಶ್ರೀಮತಿ ನೇತ್ರಾ ಕುಮಾರ್, ಕುಮಾರಿ ಪೂರ್ಣಿಮಾ ಅಡಿಗ, ಶ್ರೀಮತಿ ಉಮಾ ಶ್ರೀನಿವಾಸ್, ಶ್ರೀಮತಿ ಜಯಶ್ರೀ ಬಸವರಾಜ, ಶ್ರೀಮತಿ ಸವಿತಕ್ಕ, ಎಸ್. ಕುಮಾರ್, ಎನ್. ಗಂಗಾಧರ್, ರಾಜೀವ್ ಅಗಲಿ, ಕುಮಾರಿ ಹಂಸಶ್ರೀ ಮತ್ತು ಕು. ಹಿಮಾಂಶು ಅವರುಗಳು ದೇಶ ಭಕ್ತಿಗೀತೆಗಳನ್ನು ಹಾಡಿ ಕಾರ್ಯಕ್ರಮಕ್ಕೆ ಮೆರಗು ತಂದುಕೊಟ್ಟರು. ಶ್ರೀಮತಿ ಪೂಜಾ ಪಿ. ರಾವ್ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು.



**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ**
**ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ**
**ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.**
**ದೂರವಾಣಿ : 011–26109615 / 26104818**

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯನ್ನು ಬಹಳ ಸರಳವಾಗಿ ಆಚರಿಸಲಾಯಿತು. ಸಂಸ್ಥೆಯ 1981ನೇ ಸಾಲಿನ ವಿದ್ಯಾರ್ಥಿ, ಸಿಸಿಐಎಲ್ ಕಂಪೆನಿಯ ಉಪಾಧ್ಯಕ್ಷ ಪ್ರವೀಣ ಮಾಟ ಅವರು ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿದರು. ಬಳಿಕ ಮಾತನಾಡಿದ ಅವರು ದೇಶಪ್ರೇಮವನ್ನು ಬೆಳೆಸುವಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಹಿರಿದಾದುದು. ಮಕ್ಕಳಲ್ಲಿ ದೇಶಾಭಿಮಾನವನ್ನು ಬೆಳೆಸುವವರೇ ಶಿಕ್ಷಕರು. ನಾನು ಕಲಿತ ನನ್ನ ಶಾಲೆಯಲ್ಲಿಯೇ ನನಗೆ ಈ ಸುಸಂದರ್ಭ ಒದಗಿ ಬಂದಿರುವುದು ಸಂತೋಷಕರ. ಸಂಸ್ಥೆಯು ನಮ್ಮನ್ನೆಲ್ಲ ಪ್ರೀತಿಯಿಂದ ಆಹ್ವಾನಿಸಿರುವುದಕ್ಕೆ ಆಭಾರಿಯಾಗಿದ್ದೇವೆ. ಮುಂದಿನ ದಿನಗಳಲ್ಲಿ ಸಂಸ್ಥೆಯ ಅಭಿವೃದ್ಧಿಯ ಪಥದಲ್ಲಿ ನಮ್ಮ ಸಹಕಾರವು ಇದೆಯೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ವ್ಯಕ್ತಿಯೊಬ್ಬನ ಮೌಲ್ಯಯುತವಾದ ಜೀವನವೇ ನಿಜವಾದ ಸ್ವಾತಂತ್ರ್ಯ. ಇತಿಹಾಸದ ಹೆಜ್ಜೆಗುರುತುಗಳ ವಾಸ್ತವ ಚಿತ್ರಣವನ್ನು ಮಕ್ಕಳಿಗೆ ಕಟ್ಟಿಕೊಡುವುದರ ಜೊತೆಗೆ ನೈತಿಕ ಶಿಕ್ಷಣವನ್ನು ನೀಡುವ ಮೂಲಕ ಜವಾಬ್ದಾರಿಯುತ ನಾಗರಿಕನನ್ನಾಗಿ ಮಾಡುವ ಕರ್ತವ್ಯ ನಮ್ಮೆಲ್ಲರ ಮೇಲಿದೆ ಎಂದರು.

ಕಾರ್ಯಕ್ರಮದಲ್ಲಿ 1981–82ನೇ ಸಾಲಿನ ವಿದ್ಯಾರ್ಥಿಗಳಾದ ಸ್ಪಿಂಟರ್ಸ್ ಪರ್‌ಫಾರ್ಮೆನ್ಸ್ ಕಂಪೆನಿಯ ನಿರ್ದೇಶಕ ಮಧುಸೂದನ್, ಖ್ಯಾತ ವೈದ್ಯ ಡಾ. ಸಂಜೀವ ಕುಮಾರ್ ಹಾಗೂ ಅನೇಕ ಹಿರಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಂಸ್ಥೆಯ ಉಪಾಧ್ಯಕ್ಷ ಎನ್.ಪಿ. ಚಂದ್ರಶೇಖರ, ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ, ಆಡಳಿತ ಮಂಡಳಿ ಸದಸ್ಯರಾದ ಸಿ.ಎಂ. ನಾಗರಾಜ, ತಿಮ್ಮಪ್ಪ ಜಿ. ಆರ್., ಮಾಲಿನಿ ಪ್ರಹ್ಲಾದ್, ಗಿರೀಶ್ ಎಸ್., ಸಂಸ್ಥೆಯ ಶಿಕ್ಷಕ – ಶಿಕ್ಷಕೇತರ ವೃಂದದವರು, ಪೋಷಕರು ಉಪಸ್ಥಿತರಿದ್ದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್ ಸ್ವಾಗತಿಸಿದರು. ಪ್ರಾಂಶುಪಾಲ ಪ್ರಶಾಂತ ಕುಮಾರ್ ವಂದಿಸಿದರು. ಉಪನ್ಯಾಸಕಿ ಪ್ರೊಮೀಳಾ ದಹಿಯಾ ಕಾರ್ಯಕ್ರಮ ನಿರೂಪಿಸಿದರು.

ಬಳಿಕ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಿಂದ ಸ್ವಾತಂತ್ರ್ಯ ಹೋರಾಟಗಾರರ ಕುರಿತಾದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮವು ಅಂತರ್ಜಾಲದ ಮೂಲಕ ನಡೆಯಿತು.

***ಅರವಿಂದ ಬಿಜೈ***




# ಕೃತಿ ಸಮೀಕ್ಷೆ

# ಸವಿತಾ ಇನಾಮದಾರ್ ಅವರ ನಾಟಕಗಳ ಸಂಕಲನ

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ರಾಷ್ಟ್ರ ರಾಜಧಾನಿ ನವದೆಹಲಿಯ ಕನ್ನಡ ರಂಗಭೂಮಿಯು ತನ್ನದೇ ಒಂದು ವಿಶಿಷ್ಟ ಪರಂಪರೆಯ ಮೂಲಕ ಗುರುತಿಸಿಕೊಂಡಿದೆ. ಕಳೆದ ಶತಮಾನದ ಎಪ್ಪತ್ತು ಎಂಬತ್ತರ ದಶಕದಲ್ಲಿ ಬಿ.ವಿ. ಕಾರಂತ್, ಎಂ.ಎಸ್. ಸತ್ಯು ಮೊದಲಾದವರ ಕ್ರಿಯಾಶೀಲತೆಯ ಮೂಲಕ 'ಕನ್ನಡ ಭಾರತಿ'ಯ ಮೂಲಕ ನವದೆಹಲಿಯಲ್ಲಿ ಒಂದು ಗಟ್ಟಿ ಅಡಿಪಾಯವನ್ನು ಹಾಕಿದ ಕನ್ನಡ ರಂಗಭೂಮಿಯು ಮುಂದೆ ಅದರಲ್ಲಿ ಪಾಲ್ಗೊಂಡಿದ್ದ ಪ್ರಭಾಕರ್ ರಾವ್, ಭೀಮರಾವ್ ಮುರಗೋಡ್, ಅರವಿಂದ ಕೌಜಲಗಿ, ಎಚ್.ಎಸ್. ಕುಲಕರ್ಣಿ ಮೊದಲಾದವರ ಪ್ರಯತ್ನದಿಂದ ಇನ್ನಷ್ಟು ಮುಂದುವರಿಯಿತು. ದೆಹಲಿ ಕರ್ನಾಟಕ ಸಂಘವು ಪ್ರತಿ ವರ್ಷ ನಡೆಸುತ್ತಿದ ಏಕಾಂಕ ನಾಟಕ ಸ್ಪರ್ಧೆಯ ಜತೆಗೆ ಕರ್ನಾಟಕದಿಂದ, ಮುಖ್ಯವಾಗಿ ಬೆಂಗಳೂರಿನಿಂದ, ಬಂದು ಇಲ್ಲಿ ಪ್ರದರ್ಶನ ನೀಡುತ್ತಿದ್ದ ತಂಡಗಳ ನಾಟಕಗಳು ನಂತರದ ದಶಕಗಳಲ್ಲಿ ಕನ್ನಡ ರಂಗಭೂಮಿಯನ್ನು ನವದೆಹಲಿಯಲ್ಲಿ ಬೆಳೆಸಲು ಸಹಕಾರಿಯಾದವು. ಆ ಘಟ್ಟದಲ್ಲಿ ನವದೆಹಲಿಯ ವಿವಿಧ ಬಡಾವಣೆಗಳಲ್ಲಿ ವಾಸಿಸುತ್ತಿದ್ದ ಕನ್ನಡ ಕುಟುಂಬಗಳು ತಮ್ಮದೇ ತಂಡಗಳನ್ನು ಕಟ್ಟಿ ಈ ಮಹಾನಗರದಲ್ಲಿ ಕನ್ನಡ ನಾಟಕಗಳನ್ನು ಆಡುತ್ತಾ ಕನ್ನಡ ರಂಗಚಟುವಟಿಕೆಯನ್ನು ಮುಂದುವರಿಸಿದವು. ಸಂಘವು ಏಕಾಂಕ ನಾಟಕ ಸ್ಪರ್ಧೆಯನ್ನು ನಿಲ್ಲಿಸಿದರೂ ಇಲ್ಲಿನ ಕನ್ನಡ ರಂಗಾಸಕ್ತರು ಸಂಘದ ಸುಸಜ್ಜಿತ ಸಾಂಸ್ಕೃತಿಕ ಸಮುಚ್ಚಯದ ರಂಗವೇದಿಕೆಯನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಲು ಆಗೊಮ್ಮೆ ಈಗೊಮ್ಮೆ ಕನ್ನಡ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾರೆ.

ನವದೆಹಲಿಯಲ್ಲಿ ದಶಕಗಳಿಂದ ನೆಲೆಸಿರುವ ಕರ್ನಾಟಕದ ಬೆಳಗಾವಿ ಜಿಲ್ಲೆಯ ಸವಿತಾ ಇನಾಮದಾರ್ ಅವರು ನಾಟಕಗಳಲ್ಲಿ ಅಭಿನಯಿಸುತ್ತಾ, ನಾಟಕಗಳನ್ನು ನಿರ್ದೇಶಿಸುತ್ತಾ ಮತ್ತು ಕೆಲವು ನಾಟಕಗಳನ್ನು ಬರೆದು ದೆಹಲಿಯ ರಂಗಭೂಮಿಯಲ್ಲಿ ತಮ್ಮ ಅನುಪಮವಾದ ಗುರುತೊಂದನ್ನು ಮಾಡುತ್ತಿದ್ದಾರೆ. ಅವರು ತಾನೇ ಅಭಿನಯಿಸಿ, ನಿರ್ದೇಶಿಸಲು ಕೆಲವೊಂದು ನಾಟಕಗಳನ್ನು ಬರೆದಿರುವುದು ಅವರ ಸಾಹಿತ್ಯಿಕ ಹಾಗೂ ಕಾವ್ಯಾತ್ಮಕ ಒಲವುಗಳನ್ನು ಬಿಂಬಿಸುತ್ತದೆ. ಅಂತಹ ಆಯ್ದ ಕೆಲವೊಂದು ನಾಟಕಗಳನ್ನು ಅವರು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವುದು ಸಾಹಿತ್ಯ ಮತ್ತು ರಂಗಭೂಮಿ ಎರಡಕ್ಕೂ ನೀಡುವ ಅಮೂಲ್ಯವಾದ ಕೊಡುಗೆಯಾಗಿದೆ. ಸಾರ್ವಜನಿಕವಾಗಿ ಕನ್ನಡ ಭಾಷೆಯು ಮೌನವಾಗಿರುವ ಹೊರನಾಡಿನಲ್ಲಿ ಈ ಕೆಲಸ ಆಗುತ್ತಿರುವುದು ಬಹಳ ಪ್ರಾಮುಖ್ಯವಾಗುತ್ತದೆ.

ಹೊರನಾಡಿನಲ್ಲಿ ಅದರಲ್ಲೂ ದೇಶದ ರಾಜಧಾನಿಯಲ್ಲಿರುವವರಿಗೆ ಬೇರೆ ಬೇರೆ




ಪ್ರಕಾಶಕರು : ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ
ಪುಟಗಳು : 180, ಬೆಲೆ : ರೂ. 150/-
ವರ್ಷ : 2019

ಭಾಷೆಗಳ, ಬೇರೆ ಬೇರೆ ದೇಶ ಮತ್ತು ರಾಜ್ಯಗಳ ರಂಗಭೂಮಿಯನ್ನು ಪ್ರತ್ಯಕ್ಷವಾಗಿ ಅನುಭವಿಸಲು ವಿಪುಲವಾದ ಅವಕಾಶಗಳಿವೆ. ಜತೆಗೆ ಇಲ್ಲಿ ನಾಡಿನ ಹೆಸರಾಂತ ತಂಡಗಳ ಮೂಲಕ ಕನ್ನಡದ ಉನ್ನತ ಗುಣಮಟ್ಟದ ನಾಟಕಗಳ ಪ್ರದರ್ಶನವೂ ಆಗುತ್ತವೆ. ಈ ಹಿನ್ನಲೆಯಲ್ಲಿ ಸವಿತಾ ಇನಾಮದಾರ್ ಅವರ ನಾಟಕಗಳು ವಿಭಿನ್ನವಾಗಿ ತನ್ನ ಅಂತರ್ಯ ಮತ್ತು ಪರಿಸರವನ್ನು ಹೊಸದೊಂದು ಆಯಾಮದ ಮೂಲಕ ಪ್ರೇಕ್ಷಕರನ್ನು ತಲುಪಲು ಪ್ರಯತ್ನಿಸಿರುವುದನ್ನು ಕಾಣಬಹುದು. ಅವರ ಬದುಕು ಕೂಡ ಸೃಜನಶೀಲತೆಯ ಬಹು ಆಯಾಮಗಳ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತದೆ. ಅವರು ಬರೆದಿರುವ ನಾಟಕಗಳು ಅವರಿಗೆ ರಂಗಭೂಮಿಯಲ್ಲಿ ಪ್ರದರ್ಶನಕ್ಕಾಗಿಯೇ ಆಗಿರುವುದರಿಂದ ರಂಗವೇದಿಕೆಯ ಮೇಲಿನ ತಾಂತ್ರಿಕತೆ, ರಂಗಸಜ್ಜಿಕೆ, ರಂಗ ಕಲಾವಿದರ ಅಭಿನಯದ ಸ್ವಾತಂತ್ರ್ಯತೆ ಮತ್ತು ಮಿತಿಗಳನ್ನು ಕೂಡಾ ಅರ್ಥ ಮಾಡಿಕೊಂಡೇ ಬರೆದಿದ್ದಾರೆ.

ಮಹಿಳಾ ಸಂಘಗಳು ಮಾಡುವ ನಾಟಕಗಳಲ್ಲಿ ಹೆಚ್ಚು ಮಹಿಳಾ ಪಾತ್ರಗಳಿದ್ದರೆ ಎಲ್ಲರಿಗೂ ಸಂತಸ. 'ಅತ್ಯವ್ವಾ' ಅಂತಹ ನಾಟಕಗಳಲ್ಲಿ ಒಂದು. ಕನ್ನಡ ಭಾಷೆಯ ಪ್ರಾದೇಶಿಕ ವೈವಿಧ್ಯತೆಗಳನ್ನು ಉಪಯೋಗಿಸಿ, ವಿವಿಧ ವಯೋಮಾನಗಳ ಮಹಿಳೆಯರು ಮಾಡಬಹುದಾದ ಹಲವು ಪಾತ್ರಗಳು ಇರುವ ನಾಟಕ ಇದು. ಪ್ರತಿಭೆಯ ಪ್ರದರ್ಶನದೊಂದಿಗೆ ಕುತೂಹಲ ಮತ್ತು ಲವಲವಿಕೆಯನ್ನು ಬಿಂಬಿಸುವ ಈ ನಾಟಕವನ್ನು ರಂಗದಲ್ಲಿ ಪ್ರದರ್ಶಿಸುವಾಗ ಹಲವು ಎಕ್ಸ್‌ಪೆರಿಮೆಂಟ್‌ಗಳನ್ನು ಒಳಗೂಡಿಸಿ ಪ್ರದರ್ಶಿಸಬಹುದು. 'ಯಾವಾಗ್ಲೂ ಸಂತೋಷದಿಂದ ಇರ್ರಿ ಮತ್ತು ಉಳಿದವರಿಗೂ ಸಂತೋಷವನ್ನು ಹಂಚರಿ' ಎಂಬ ಸಂದೇಶದೊಂದಿಗೆ ಅತ್ಯವ್ವಾ ನಾಟಕ ಅಂತ್ಯಗೊಳ್ಳುತ್ತದೆ.

ಸಾವಿರ ಸುಳ್ಳು ಹೇಳಿಯಾದರೂ ಒಂದು ಮದುವೆ ಮಾಡಿಸಬೇಕು ಎಂಬ ನಾಣ್ನುಡಿಯನ್ನೇ 'ಮದುವೆ... ಮೂಕಿಯ ಮದುವೆ' ನಾಟಕದ ವಿಷಯವನ್ನಾಗಿಸಿ ಒಂದೊಳ್ಳೆಯ ಕತೆಯನ್ನಾಗಿಸಿದ್ದಾರೆ. ಸುಲಲಿತವಾಗಿ ಸಾಗುವ ಕತೆ ಹಲವು ತಿರುವುಗಳೊಂದಿಗೆ ಸುಖಾಂತ್ಯವಾಗುತ್ತದೆ.

ಈ ಸಂಕಲನದಲ್ಲಿರುವ 'ಜೀವನ ಧಾರೆ' ಒಂದು ಕಿರು ನಾಟಕವಾದರೂ ಅದರಲ್ಲಿರುವ ಸಂದೇಶ ಮತ್ತು ವಸ್ತು ವಿಶಾಲವಾದುದು. ವಯಸ್ಸಾದ ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುವ ಮಕ್ಕಳು ಒಂದೆಡೆಯಾದರೆ, ನಿರ್ಮಲವಾದ ಮಮತೆಯಿಂದ ಸಾಕಿದ ಮೊಮ್ಮಗಳು ತನ್ನ ಎಂಗೇಜ್‌ಮೆಂಟ್‌ನ ದಿನವೇ ಅಜ್ಜಿಯನ್ನು ವೃದ್ಧಾಶ್ರಮದಿಂದ ತಂದು ಎಲ್ಲರಿಗೂ ಪಾಠ ಕಲಿಸುತ್ತಾಳೆ. ಈ ಕಿರು ನಾಟಕದ ಕತೆಯನ್ನು ಕಟ್ಟಿದ ರೀತಿಯು ಸವಿತಾ ಇನಾಮದಾರ್ ಅವರು ಪ್ರಬುದ್ಧತೆಯಿಂದ ನಾಟಕದಲ್ಲಿ ಭಾವನೆಗಳ ಏರಿಳಿತಗಳನ್ನು ಪರಿಣಾಮಕಾರಿಯಾಗಿ ತರಲು ಪ್ರಯತ್ನಿಸಿರುವುದನ್ನು ತೋರಿಸುತ್ತದೆ. ನಾಟಕವು ರಂಗದ ಮೇಲೆ ಕ್ರಿಯಾತ್ಮಕವಾಗಿ ಬೆಳೆಯುತ್ತಿರುವಂತೆ ಉದ್ವಿಗ್ನ ಪರಿಸ್ಥಿತಿಗಳು ಕಾಡುತ್ತವೆ. ಓದುಗರು ಅಥವಾ ಪ್ರೇಕ್ಷಕರು ಕತೆಯು ಒಂದು ಪಕ್ಕಾ ದಾರಿಯಲ್ಲಿ ಮುಂದುವರಿಯುತ್ತಾ ಹೋಗುತ್ತಿದೆ ಎಂದು ಕೊಳ್ಳುತ್ತಿರುವಾಗಲೇ ಭಾವ ತೀವ್ರತೆಯ ತಿರುವೊಂದನ್ನು ನೀಡಿ ಪ್ರೇಕ್ಷಕರು ನಾಟಕದೊಡನೆ ಬೆರೆತು ಕೊಳ್ಳುವಂತೆ ಮಾಡಿದ್ದಾರೆ. ಸುಖಾಂತ್ಯದಿಂದ ನಾಟಕ ಮುಗಿದರೂ ಹಲವು ಸಮಯದ ವರೆಗೆ ಕಾಡುವ ಮತ್ತು ಚಿಂತನೆಗೆ ಹಚ್ಚುವ ಕತೆಯನ್ನು ಸವಿತಾ ಇನಾಮದಾರ್ ಅವರು ಈ ನಾಟಕದ ಮೂಲಕ ನೀಡುತ್ತಾರೆ.

'ಮಧುರ ಮಿಲನ' ಒಂದು ರಮ್ಯ ಪ್ರೀತಿಯ ಸಂಬಂಧವನ್ನು ಪ್ರತಿಬಿಂಬಿಸುವ ನಾಟಕ. ಕಾಲೇಜಿನಲ್ಲಿ ಹುಡುಗ ಹುಡುಗಿಯರ ನಡುವೆ ಮೂಡಿದ ಪ್ರೇಮ ಮುಂದುವರಿಯಲಾಗದೇ ಮುಂದೊಂದು ದಿನ ಇನ್ನೊಂದು ಮದುವೆಯ ಸಂದರ್ಭದಲ್ಲಿ ಮತ್ತೆ ಮಿಲನವಾಗಿ ಪ್ರೇಮದ ಆಕಾಂಕ್ಷೆಯಂತೆ ಮದುವೆ ನಡೆಯುತ್ತದೆ. ಚುರುಕು ಸಂಭಾಷಣೆ, ಹಾಡು, ನೃತ್ಯ, ಯುವಕ ಯುವತಿಯರ ಜತೆಗೆ ಅಂತಸ್ತು ಆಡಂಬರಗಳಿಂದ ವಿಜೃಂಭಿಸುವ ಮಹಿಳಾಮಣಿಗಳ ಪಾತ್ರಗಳು

ಈ ನಾಟಕವನ್ನು ರಂಗದಲ್ಲಿ ಪ್ರಯೋಗಿಸಲು ಅನುಕೂಲ ಮಾಡುತ್ತವೆ.

ಸಂಕಲನದಲ್ಲಿರುವ ಇನ್ನೊಂದು ನಾಟಕ 'ಹಳೆಮನೆ ಹೊಸ ಕಳೆ' ಮಹಿಳೆಯರು ಉದ್ಯೋಗ ಮತ್ತು ಉದ್ಯಮದಲ್ಲಿ ತೊಡಗಿಸಿಕೊಂಡು ಯಶಸ್ವಿಯಾಗುವುದರೊಂದಿಗೆ ಹಳೆಮನೆಯೆಂದರೆ ಅದರ ಹಿನ್ನಲೆಯ ಕುರಿತು ಇರುವ ಪೂರ್ವಾಗ್ರಹದ ಬಗ್ಗೆ ವಿಚಾರ ಮಾಡಿಸುತ್ತದೆ.

ಈ ಸಂಕಲನದಲ್ಲಿರುವ 'ಹಿತ್ತಲ ಗಿಡ ಮದ್ದಲ್ಲ' ಒಂದು ಹಾಸ್ಯಮಯ ನಾಟಕ. ಮದುವೆಯಾಚೆಗಿನ ಸಂಬಂಧಗಳು ಬಹಳಷ್ಟು ನಾಟಕಗಳಲ್ಲಿ ಹಾಸ್ಯ ಸನ್ನಿವೇಶವನ್ನು ಸೃಷ್ಟಿಸುತ್ತವೆ. ಸವಿತಾ ಇನಾಮದಾರ್ ಅವರು ಕೂಡಾ ಇದೇ ಥೀಮ್‌ನ್ನು ಇಟ್ಟುಕೊಂಡು ಚೊಕ್ಕದಾದ ಈ ನಾಟಕದಲ್ಲಿ ಒಂದೇ ಕಚೇರಿಯಲ್ಲಿ ಕೆಲಸ ಮಾಡುವ ಗಂಡಸರು ತಮ್ಮ ಆಫೀಸಿಗೆ ಹೊಸದಾಗಿ ಬರುವ ಲೇಡಿ ಸ್ಟಾಫ್ ಹಿಂದೆ ಬಿದ್ದು ಆಗುವ ಫಜೀತಿಯನ್ನು ಕಟ್ಟಿ ಕೊಟ್ಟಿದ್ದಾರೆ.

ನವದೆಹಲಿಯ ಎಲ್ಲ ರೀತಿಯ ಕನ್ನಡ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ಯಾವುದೇ ಹಮ್ಮುಬಿಮ್ಮುಗಳನ್ನು ಇರಿಸಿಕೊಳ್ಳದೇ ನಿಸ್ಪೃಹರಾಗಿ ಕೆಲಸ ಮಾಡುತ್ತಿರುವ ಸವಿತಾ ಇನಾಮದಾರ್ ಅವರು ಬಹುಮುಖ ಪ್ರತಿಭೆಯ ವ್ಯಕ್ತಿ. ಎಲ್ಲ ಕೆಲಸಗಳಲ್ಲೂ ಅವರು ತೋರುತ್ತಿರುವ ದೃಢ ನಿಲುವುಗಳು, ಪರಿಪಕ್ವತೆಯ ಒಲವುಗಳು ಮತ್ತು ದಿಟ್ಟತನಗಳು ಈ ಸಂಕಲನವನ್ನು ಹೊರತರುವಲ್ಲಿಯೂ ಕೆಲಸ ಮಾಡಿದೆ ಎಂದನಿಸುತ್ತದೆ. ಅವರ ಸಾಹಿತ್ಯಾಸಕ್ತಿಯ ಒಡನಾಟದ ಪ್ರಭಾವದಿಂದಲೇ ನನ್ನೆರಡು ಮಾತುಗಳನ್ನು ಇಲ್ಲಿ ದಾಖಲಿಸಲು ಅವರು ಅನುವು ಮಾಡಿದ್ದಾರೆ. ಈಗಾಗಲೇ ಹಲವು ವೇದಿಕೆಗಳಲ್ಲಿ ತಮ್ಮ ಕವನಗಳನ್ನು ಓದಿರುವ, ಹಲವು ಪತ್ರಿಕೆಗಳಲ್ಲಿ ತಮ್ಮ ಕವನಗಳನ್ನು ಪ್ರಕಟಿಸಿರುವ ಮತ್ತು 'ರಂಗಿನೋಕುಳಿ' ಎಂಬ ಕವನ ಸಂಕಲನವನ್ನು ಪ್ರಕಟಿಸಿರುವ ಕವಿ ಹೃದಯದ ಸವಿತಾ ಇನಾಮದಾರ್ ಅವರ ಈ ನಾಟಕ ಸಂಕಲನ ಸಾಹಿತ್ಯಾಸಕ್ತರಿಗೆ ಮತ್ತು ರಂಗಾಸಕ್ತರಿಗೆ ಮೆಚ್ಚುಗೆಯಾಗಲಿ ಎಂದು ಹಾರೈಸುವೆ. ಅವರ ರಂಗಾಸಕ್ತಿ ಇನ್ನಷ್ಟು ಬೆಳಗಿ ಹೊಸ ಕೃತಿಗಳನ್ನು, ಹೊಸ ಪ್ರಯೋಗಗಳನ್ನು ಅವರು ಕನ್ನಡ ರಂಗಭೂಮಿಗೆ ನೀಡಲಿ ಎಂದು ಆಶಿಸುವೆ.

***ಬಾಲಕೃಷ್ಣ ನಾಯ್ಕ್ ಡಿ***

(ಮುನ್ನುಡಿಯಿಂದ)

# ಸಮಾಜಮುಖಿ ಯೋಜನೆಗಳ ಹರಿಕಾರ ಸರ್.ಎಂ. ವಿಶ್ವೇಶ್ವರಯ್ಯ

ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಅವರ ಕೊಡುಗೆ ಸ್ವತಂತ್ರ ಪೂರ್ವ ಮತ್ತು ಸ್ವತಂತ್ರ ನಂತರದಲ್ಲೂ ಆಗಾದವಾದದ್ದು. ಅವರ 102 ವರ್ಷಗಳ ಜೀವಿತಾವಧಿಯನ್ನು ಹಲವಾರು ಸಮಾಜಮುಖಿ ಯೋಜನೆಗಳಿಗೆ ಮುಡುಪಾಗಿಟ್ಟು ದಂತಕಥೆಯಾಗಿ ಇಂದಿಗೂ ನಮ್ಮ ನಾಡಿನ ಹೆಮ್ಮೆಯ ಸಾಧಕರ ಸ್ಥಾನದಲ್ಲಿ ಮುಂಚೂಣಿಯಲ್ಲಿ ಇರುತ್ತಾರೆ.

ಆಧುನಿಕ ಭಗೀರಥನಂತೆ ಇವರ ನಿರ್ಮಾಣದ ಅಣೆಕಟ್ಟುಗಳು ಹಲವಾರು ದೇಶದ ನಗರಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಅಂದು, ಇಂದು ಮತ್ತು ಮುಂದಿಗೂ ಕಲ್ಪಿಸುತ್ತಿರುವಂತಹ ಯೋಜನೆಗಳು.

ನಮ್ಮ ಎಲ್ಲಾ ಆರ್ಥಿಕ ರೋಗಗಳಿಗೂ ವಿದ್ಯಾಭ್ಯಾಸವೇ ಮದ್ದು ಎಂದು ಬಲವಾಗಿ ನಂಬಿದ್ದ ಸರ್. ಎಂ. ವಿಶ್ವೇಶ್ವರಯ್ಯ ಅವರು ಮೈಸೂರು ವಿಶ್ವವಿದ್ಯಾಲಯ, ಮಹಾರಾಣಿ ಕಾಲೇಜು, ಸಾರ್ವಜನಿಕ ಗ್ರಂಥಾಲಯ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಇನ್ನೂ ಅನೇಕ ಯೋಜನೆಗಳು ಅವರ ಸಮಗ್ರ ಕೊಡುಗೆಗಳಾಗಿ ಇಂದಿಗೂ ಜೀವಂತ. ಸರ್. ಎಂ. ವಿಶ್ವೇಶ್ವರಯ್ಯನವರು ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲ ಪ್ರೇರಕಶಕ್ತಿ ಹಾಗೂ ಕಾರಣಕರ್ತರಾಗಿದ್ದಾರೆ.

ಕನ್ನಂಬಾಡಿ ಅಣೆಕಟ್ಟು ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನು ಪೂರೈಸಿದಂತಹ ಮಹತ್ವದ ಸಾಧನೆಗಳಿಗಾಗಿ ಬ್ರಿಟಿಷ್ ಸರ್ಕಾರ ಅವರನ್ನು ನೈಟ್ ಕಮಾಂಡರ್ ಆಗಿ ಅಲಂಕರಿಸಿ 'ಸರ್' ಪದವಿಯನ್ನು ನೀಡಿತು.

ಇಂತಹ ಮಹಾನ್ ಕನ್ನಡಿಗನ ಜನ್ಮ ದಿನವನ್ನು ಸೆಪ್ಟೆಂಬರ್ 15 ರಂದು ರಾಷ್ಟ್ರೀಯ ಇಂಜಿನಿಯರ್ ದಿನವಾಗಿ ಪರಿಗಣಿಸಿ ಗೌರವಿಸುತ್ತಿರುವುದು ಅವರ ಪ್ರಾಮಾಣಿಕ ಮತ್ತು ನಿಸ್ವಾರ್ಥ ಸಾಧನೆಗೆ ಸಂದ ಗೌರವ.

ನಮ್ಮ ದೆಹಲಿ ಕನ್ನಡಿಗರು ಮತ್ತು ಕರ್ನಾಟಕ ಕೇಂದ್ರ ಮಂತ್ರಿಗಳ ಹಿತಾಸಕ್ತಿಯ ಮನವಿಯ ಮೇರೆಗೆ ದೆಹಲಿಯ ಮೋತಿ ಭಾಗ್ ಮೆಟ್ರೋ ನಿಲ್ದಾಣಕ್ಕೆ ಸರ್. ಎಂ.ವಿ. ಅವರ ಹೆಸರನ್ನು ಇಟ್ಟಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ.

ಇಂದು ನಮ್ಮ ಕನ್ನಡದ ನೆಲ, ವಿಜ್ಞಾನ, ತಂತ್ರಜ್ಞಾನಗಳ ತವರೂರಾಗಿದೆ.ಇದರ ಬುನಾದಿಯಲ್ಲಿ ವಿಶ್ವೇಶ್ವರಯ್ಯನವರ ಅಗಾಧ ಪರಿಶ್ರಮ ದೂರದೃಷ್ಟಿ, ಸಮಾಜಮುಖಿ ಯೋಜನೆಗಳಿವೆ. ಇವರ ಬದುಕು ಯುವ ಪೀಳಿಗೆಯ ಪ್ರೇರಕ ಶಕ್ತಿ. ದೆಹಲಿ ಕನ್ನಡ ಶಾಲೆಯ ವಿಜ್ಞಾನ ಪ್ರಯೋಗಾಲಯಕ್ಕೆ ಸರ್. ಎಂ.ವಿ. ಅವರ ನಾಮಕರಣ ಮಾಡಿ ವಿದ್ಯಾರ್ಥಿಗಳಲ್ಲಿ ವಿಶ್ವೇಶ್ವರಯ್ಯ ನವರ ಸಾಧನೆಯ ಮಾಹಿತಿ ಮೂಡಿಸುವಂತೆ ಈ ಮೂಲಕ ಮನವಿ ಮಾಡುತ್ತೇನೆ.



ಮುದ್ದೇನ ಹಳ್ಳಿಯ ಮುದ್ದಿನ ಕಂದ
ಕರುನಾಡು ಕಂಡ ತಾಂತ್ರಿಕ ಯೋಗಿ
ಮಣ್ಣಿನ ಮಕ್ಕಳ ಭಾಗ್ಯದ ಜ್ಯೋತಿ
ವಿಜ್ಞಾನದ ಹಾದಿಗೆ ನೀನೇ ಸ್ಫೂರ್ತಿ
ವಿಶ್ವ ಕಂಡ ವಿಶ್ವೇಶ್ವರಯ್ಯ ನೀನೇ ಇಂದಿನ
ಆಧುನಿಕತೆಯ ತಾಂತ್ರಿಕ-ಮಾಂತ್ರಿಕ
ಕನ್ನಡ ನಾಡಿನ ಹೆಮ್ಮೆಯ ಸಾಧಕ
ನಿನ್ನಯ ಸಾಧನೆಯ ಫಲವ ಉಣುತಿದೆ ಮನುಕುಲ
ಇಂದು, ಮುಂದು ಎಂದೆಂದು. . .
ಇದೋ ನಿನಗೆ ನಮ್ಮ ನಮನ
ಭಕ್ತಿ ಜ್ಞಾನ ವಿಜ್ಞಾನದ ಬೆಳಕಿನ
ನಮನ.

***ಹರಿಪ್ರಿಯ ಎಸ್.***

# ನನ್ನ ಬದುಕಿಗೆ ಬದ್ಧತೆ ಕಲಿಸಿದ ರಂಗಭೂಮಿ

**–ಅನ್ಬುರಾಜ್**

ದಿನಾಂಕ 08.08.2021 ರಂದು ದೆಹಲಿಯ 'ದಿನಕರ' ನಿಸ್ತಂತು ಮಾಧ್ಯಮದ ಮೂಲಕ ಹಮ್ಮಿಕೊಂಡಿದ್ದ 'ರಂಗಭೂಮಿಯಿಂದ ಪರಿವರ್ತನೆಯ ಪಥದಲ್ಲಿ' ಸಂವಾದ ಕಾರ್ಯಕ್ರಮದಲ್ಲಿ ಮೂಲತಃ ತಮಿಳುನಾಡಿನ ಕಲದಪಲ್ಲ ಹಳ್ಳಿ, ಈರೋಡ ಜಿಲ್ಲೆಯ ಶ್ರೀ ಅನ್ಬುರಾಜ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಈ ರಂಗಭೂಮಿ ನನ್ನ ಬದುಕಿಗೆ ಬದ್ಧತೆಯನ್ನು, ಭರವಸೆಯನ್ನು ಕಲಿಸಿಕೊಟ್ಟಿತು. ರಂಗಭೂಮಿಯ ಸಂಪರ್ಕವಿಲ್ಲದಿದ್ದಲ್ಲಿ ಇಂದಿಗೂ ನಾನೋರ್ವ ಅಪರಾಧಿಯಾಗಿರುತ್ತಿದ್ದೆ, ನನ್ನ ಬದುಕು ನಾಶವಾಗುತಿತ್ತು. ಸೆರೆಮನೆಗೆ ಸೇರಿದ ಮೇಲೆ ಬದುಕೇ ಅಂತ್ಯ ಎಂದು ತಿಳಿಯುವ ಈ ಜಗತ್ತಿನ ಮನಸ್ಥಿತಿಗೆ ತದ್ವಿರುದ್ಧವಾಗಿ ನನ್ನ ನಿಜವಾದ ಬದುಕು ಆರಂಭವಾದದ್ದೇ ಸೆರೆಮನೆಯಿಂದ. ಹೀಗೆ ಸೆರೆಮನೆಯಿಂದ ರಂಗಭೂಮಿಯೆಡೆಗೆ, ತಮಿಳಿನಿಂದ ಕನ್ನಡದವರೆಗಿನ ಅನುಭವವವನ್ನು ಎಳೆಎಳೆಯಾಗಿ ಬಿಚ್ಚಿಟ್ಟ ರೀತಿ ರೋಮಾಂಚನವಾಗಿತ್ತು.

ತಮಿಳುನಾಡಿನ ಈರೋಡ ಜಿಲ್ಲೆಯ ಪುದುಕಾಡು ಹಳ್ಳಿಯಲ್ಲಿ ಬೆಳೆದ ಇವರ ತಂದೆತಾಯಿ ನೇಯ್ಗೆಗಾರರು. ಹಳ್ಳಿಯನ್ನೇ ಸ್ವರ್ಗ ಎಂದು ತಿಳಿದ ಅನ್ಬುರಾಜ್ ಅವರು ಹಳ್ಳಿಯ ಸುತ್ತ ಆವರಿಸಿರುವ ದಟ್ಟ ಅರಣ್ಯದ ಸಹವಾಸದಿಂದ ಪ್ರಾಣಿ, ಪಕ್ಷಿ, ಗಿಡ-ಮರಗಳ ನಾಡಿಯನ್ನು ಅರಿತವರು. ಬಾಲ್ಯದಲ್ಲಿಯೇ ಪ್ರಕೃತಿಯ ಮಡಿಲಿನಲ್ಲಿ ಪ್ರಾಣಿ-ಪಕ್ಷಿಗಳ ಜೋಗುಳವ ಕೇಳಿ ಬೆಳೆದ ಇವರ ವ್ಯಕ್ತಿತ್ವದ ಮೇಲೆ ಅಜ್ಜಿ ಬಹಳಷ್ಟು ಪ್ರಭಾವ ಬೀರಿದವರು. ಹಾಗೆಯೇ ಬದುಕಿಗೆ ಪ್ರಕೃತಿಯೇ ಪ್ರೇರಣೆಯಾಯಿತು ಎನ್ನುವ ಇವರಿಗೆ ಔಪಚಾರಿಕ ಶಿಕ್ಷಣದ ಬಗ್ಗೆ ಒಲವಿರಲಿಲ್ಲ. ಕೇವಲ ಬಿಸಿಯೂಟಕ್ಕಾಗಿ, ಮೆಚ್ಚಿನ ಗುರುಗಳಲ್ಲಿ ಮಾತನಾಡಲು ಶಾಲೆಯ ಕಡೆ ಹೆಜ್ಜೆ ಇಡುತ್ತಿದ್ದರು.

ನಿಸರ್ಗದ ಮಡಿಲಲ್ಲಿ ಬದುಕುತ್ತಿದ್ದ ಅನ್ಬುರಾಜ್ ಅವರ ಬಾಲ್ಯದಲ್ಲಿ ಸಿನಿಮಾ ಮಾದರಿಯಂತೆ ತಿರುವು ಮೂಡಿದ ಸನ್ನಿವೇಶವನ್ನು ಅವರು ಈ ರೀತಿ ವಿವರಿಸುತ್ತಾರೆ. "ವೀರಪ್ಪನ್‌ನ ಹುಡುಕಾಟದ ನೆಪದಲ್ಲಿ ಎಸ್‌ಟಿಎಫ್ ಅವರು ವೀರಪ್ಪನ್ ಅವನ ಸಮುದಾಯದವರು ಎನ್ನುವ ಒಂದೇ ಕಾರಣಕ್ಕಾಗಿ ನಮ್ಮ ಹಳ್ಳಿಯವರ ಮೇಲೆ ಮಾಡುವ ದೌರ್ಜನ್ಯವನ್ನು ಕಂಡು ಪೋಲಿಸ್ ಆಗುವ ಕನಸನ್ನು ಕೈಚೆಲ್ಲಿ ಬಿಟ್ಟೆ. ಜೊತೆಗೆ ವ್ಯವಸ್ಥೆಯ ಬಗ್ಗೆ ತಿರಸ್ಕಾರ ಭಾವ ಮೂಡಿತು. ಅದು ಮುಂದೆ ವೀರಪ್ಪನ್ ಬಳಗವನ್ನು ಸೇರುವಂತೆ ಮಾಡಿತು. ಮುಂದೆ ವೀರಪ್ಪನ್ ಜೊತೆ ಮೂರು ವರ್ಷ ಇದ್ದೆ. ಅಪಹರಣ ಮಾಡಿದ್ದು, ಗಂಧದ ಮರ ಕಡಿದದ್ದು, ಆನೆಗಳನ್ನು ಸಾಯಿಸಿದ್ದು ಇವೆಲ್ಲವುಗಳು ಅಪರಾಧಗಳೇ ಆದರೂ ವೀರಪ್ಪನ್ ಕಾಡಿನ, ಪರಿಸರದ ಬಗ್ಗೆ ಅಪಾರ ಜ್ಞಾನವನ್ನು ಹೊಂದಿದ್ದ. ಸರಕಾರ ಶರಣಾಗತಿಗೆ ಕೇಳಿಕೊಂಡಾಗ ವೀರಪ್ಪನ್ ಮೊದಲು ನನ್ನನ್ನು ಸೇರಿಸಿ ಒಟ್ಟು ಮೂವರನ್ನು ತಮಿಳುನಾಡು ಸರಕಾರಕ್ಕೆ 10.04.1998ರಂದು ಒಪ್ಪಿಸಿದನು. ನಮ್ಮನ್ನು ಕೇವಲ ಆರು ತಿಂಗಳು ಜೈಲಲ್ಲಿಟ್ಟು ನಂತರ ಜಾಮೀನು ನೀಡಿ ಒಂದು ವರ್ಷದೊಳಗೆ ಕೇಸ್ ಮುಗಿಸುತ್ತೇವೆ ಎಂದು ಭರವಸೆ ನೀಡಿದ್ದ ಸರಕಾರ ಹೇಳಿದ ರೀತಿ ನಡೆದುಕೊಂಡಿಲ್ಲ ಎಂಬುವುದು ವಿಷಾದಕರ. ಆದರೆ ನನ್ನ ಬದುಕಿಗೆ ಇದು ತಿರುವು ನೀಡಿದ್ದಂತು ಸತ್ಯ" ಎನ್ನುತ್ತಾರೆ.

ಕನ್ನಡ ಭಾಷೆ ಕಲಿಕೆ ಹಾಗೂ ರಂಗಭೂಮಿಯ ಆಸಕ್ತಿಯ ಕುರಿತು ಮಾತು ಮುಂದುವರಿಸುತ್ತಾ, ಸೆರೆಮನೆಯಲ್ಲಿ ಸಿಕ್ಕಿದ ಇಬ್ಬರು ಶಿಕ್ಷಕರು ಪುಸ್ತಕ ಪ್ರೀತಿಯನ್ನು ಬೆಳೆಸಿದರು. ಸಾಹಿತ್ಯದ ಓದು ಒಂದು ಹೊಸ ಪ್ರಪಂಚವನ್ನೇ ಕಣ್ಣಮುಂದಿಟ್ಟಿತ್ತು. ಇದರಿಂದ ಪ್ರಭಾವಿತನಾಗಿ ಸೆರೆಮನೆಯಲ್ಲಿ ಸಿಗಬೇಕಾದ ಮೂಲಭೂತ ಹಕ್ಕುಗಳಿಗೆ ಹೋರಾಡಿದ್ದೇನೆ, ಅದಕ್ಕಾಗಿ ಶಿಕ್ಷೆಯನ್ನು ಅನುಭವಿಸಿದ್ದೇನೆ. ಸೆರೆಮನೆಯಲ್ಲಿಯೂ ದೌರ್ಜನ್ಯಗಳಿವೆ ಎಂದಾಗ ನಿಮಗೆಲ್ಲರಿಗೂ ಅಚ್ಚರಿಯೆನಿಸಬಹುದು. ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ತಮಿಳುನಾಡು ಸೆರೆಮನೆಯಲ್ಲಿಯೇ ಅತಿ ಕ್ರೌರ್ಯವಿದೆ ಎನ್ನಬಹುದು. ಸೆರೆಮನೆಯಲ್ಲಿ ಶೌಚಾಲಯ ಇರಲಿಲ್ಲ. ಮಡಿಕೆಯಲ್ಲಿಯೇ ಮಲವಿಸರ್ಜನೆ ಮಾಡಿ ಬಿಸಾಕಿ ನಂತರ ಅದನ್ನು ತೊಳೆದಿಡುವಂತಹ ಅಸಹ್ಯಕರ ಪದ್ಧತಿಯನ್ನು ವಿರೋಧಿಸಿದಕ್ಕಾಗಿ ಪೋಲಿಸರಿಂದಲೇ ಹಿಂಸೆಗೊಳಗಾದೆ. ಮುಂದೆ ಕರ್ನಾಟಕ ಸೆರೆಮನೆಗೆ ಕಳುಹಿಸಿದರು. ಕರ್ನಾಟಕದ ಸೆರೆಮನೆಯ ಕುರಿತು ಬಹಳ ಕುತೂಹಲನಾಗಿದ್ದೆ. ಅಲ್ಲಿ ಗೆಳೆಯರನ್ನು ಕಟ್ಟಿಕೊಂಡೆ, ಕನ್ನಡ ಕಲಿಯಲು ಆಸಕ್ತನಾದೆ, ಪ್ರಜಾವಾಣಿ ಪತ್ರಿಕೆ ಓದಲು ಪ್ರಯತ್ನಿಸಿದೆ. ಹೀಗೆ ಕನ್ನಡ ಮಾತನಾಡುವುದನ್ನು ಸೆರೆಮನೆಯಲ್ಲಿಯೇ ಕಲಿತೆ.

ಇವೆಲ್ಲವುಗಳ ಮಧ್ಯೆ 16ನೇ ವಯಸ್ಸಿಗೆ ವೀರಪ್ಪನ್ ಜೊತೆ ಸೇರಿ 19ನೇ ವಯಸ್ಸಿನಲ್ಲಿ ಜೈಲಿಗೆ ಬಂದ ನನಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದಾಗ ಬಹಳ ಆತಂಕಕ್ಕೆ ಒಳಗಾದೆ. ಪ್ರಕೃತಿಯೊಂದಿಗೆ ಬೆರೆತ ನನಗೆ ಸೆರೆಮನೆ ಹಿಂಸೆಯಾಯಿತು. ಅಲ್ಲಿಂದ ತಪ್ಪಿಸಲು ಸಂಚು ಹೂಡಿದೆ. ಮೂರು ಗೋಡೆಗಳನ್ನು ಹಾರಿ ಪಾರಾಗಲು ಸುಮಾರು ಎರಡು ತಿಂಗಳು ಯೋಜನೆ ರೂಪಿಸಿದ್ದೆ. ಈ ಸಮಯದಲ್ಲಿ ನಾಟಕಕಾರ ಹುಲಗಪ್ಪ ಕಟ್ಟಿಮನಿ ಅವರ ಪರಿಚಯವಾಯಿತು. ಅವರ ಒತ್ತಾಸೆಯಂತೆ ನಾವೆಲ್ಲರೂ 'ಸಂಕಲ್ಪ' ಎನ್ನುವ ತಂಡ ಕಟ್ಟಿದೆವು. ನಾಟಕದ ಅಭ್ಯಾಸ ಮಾತ್ರ ಸೆರೆಮನೆಯಲ್ಲಿ, ಪ್ರದರ್ಶನ ಸೆರೆಮನೆಯ ಹೊರಗೆ ಅಂದರೆ ರಂಗಮಂದಿರದಲ್ಲಿ ಅಂದಾಗ ಬಹಳ ಆನಂದವಾಯಿತು. ಏಕೆಂದರೆ ಓಡಿಹೋಗಲು ದಾರಿ ಸಿಗಬಹುದೆಂಬ ಆಲೋಚನೆಯಿಂದ. ಕಂಬಾರ, ಕಾರ್ನಾಡ್, ಎಚ್.ಎಸ್. ಶಿವಪ್ರಕಾಶ್, ದೇವನೂರು ಮಹಾದೇವ ಮುಂತಾದ ನಾಟಕಕಾರರ ಕೃತಿಗಳನ್ನು ನಮಗೆ ಓದಲು ತಂದುಕೊಡುತ್ತಿದ್ದರು. ಇಂತಹ ಕೃತಿಗಳ ಓದು ನನಗೆ ತಿಳಿಯದಂತೆಯೇ ನನ್ನ ಮನಸ್ಸಿನಲ್ಲಿದ್ದ ಕ್ರೋಧ, ವಂಚನೆ, ಕೆಟ್ಟ ಭಾವನೆ, ವಿಚಾರಗಳನ್ನು ಅಳಿಸಿ ನನ್ನ ಮೇಲೆ ದೊಡ್ಡ ಪರಿಣಾಮ ಬೀರಿತ್ತು. ಇದಕ್ಕೆ ಕಾರಣ ರಂಗಭೂಮಿಯ ಗುಣ, ಸಾಹಿತ್ಯದ ಶಕ್ತಿ.



ಅನ್ಬುರಾಜ್

ಮುಂದೆ ಈ ನಾಟಕಗಳು ಸೆರೆಮನೆಯಲ್ಲಿದ್ದ ಬಂಧಿಗಳನ್ನು ವ್ಯಕ್ತಿಗಳನ್ನಾಗಿ ಪರಿಚಯಿಸಿತು. ಮೊದಲ ಪ್ರದರ್ಶನ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದಾಗ ಪ್ರೇಕ್ಷಕರ ಪ್ರತಿಕ್ರಿಯೆ, ಪ್ರೋತ್ಸಾಹ ಕಂಡಾಗ ಓಡಿ ಹೋಗುವ ನನ್ನ ಮನದ ಆಲೋಚನೆಗೆ ತಿಲಾಂಜಲಿ ಇಟ್ಟೆ. ಈ ಸನ್ನಿವೇಶವೇ ಬದುಕಿಗೆ ಮಹತ್ವದ ತಿರುವು ನೀಡಿತು. ನನ್ನ ಬಿಡುಗಡೆಯು ಕಾನೂನಾತ್ಮಕವಾಗಿ ಆಗಬೇಕು ಎಂಬ ಸಂಕಲ್ಪವನ್ನು ಕಟ್ಟಿಕೊಂಡೆ. ಸುಮಾರು ಕನ್ನಡದ 19 ನಾಟಕಗಳಲ್ಲಿ ಅಭಿನಯಿಸಿದ ನಾನು 10 ವರ್ಷಗಳ ಕಾಲ ನಮ್ಮ ನಾಟಕ ತಂಡದಲ್ಲಿದ್ದ ಮಹಿಳಾ ಖೈದಿ ರೇವತಿ ಅವರನ್ನು ಪ್ರೀತಿಸಿ 2011ರಲ್ಲಿ ಹೊರಗಡೆ ಬಂದು ವಿವಾಹವಾದೆ. ಮುಂದೆ ಓರ್ವ ಜವಾಬ್ದಾರಿಯುತ ನಾಗರೀಕನಾಗಿ ಬಿಡುಗಡೆಗೊಂಡೆ. ಇದೀಗ ತಮಿಳುನಾಡಿನಲ್ಲಿ ಬುಡಕಟ್ಟು ಜನಾಂಗದವರ ಉದ್ಧಾರಕ್ಕಾಗಿ 'ಟ್ರೈಬಲ್ ಫೌಂಡೇಶನ್' ಸಂಸ್ಥೆಯನ್ನು ಗೆಳೆಯರ ಸಹಕಾರದೊಂದಿಗೆ ಕಟ್ಟಿ ಸಾಮಾಜಿಕ ಸೇವೆ ಮಾಡುತ್ತಿದ್ದೇನೆ. ಜೊತೆಗೆ ಶಾಲೆಯನ್ನು ನಡೆಸುತ್ತಿದ್ದೇನೆ. ಈ ಶಾಲೆಯಲ್ಲಿ ಗಾಂಧಿತತ್ವವನ್ನು, ಅಹಿಂಸೆಯನ್ನು, ಪ್ರಕೃತಿ ಪ್ರೀತಿಯನ್ನು ಮಕ್ಕಳಲ್ಲಿ ಬೆಳೆಸುತ್ತಿದ್ದೇನೆ.

ಸುಮಾರು 20 ವರ್ಷಗಳ ಕಾಲದ ಸೆರಮನೆಯಿಂದ ನಾನು ಕಂಡುಕೊಂಡಿರುವುದು ಚಿತ್ರಹಿಂಸೆಯಿಂದ ಅಪರಾಧಿಗಳನ್ನು ಪರಿವರ್ತಿಸಲು ಸಾಧ್ಯವಿಲ್ಲ. ಅವರನ್ನು

ವ್ಯವಸ್ಥೆಯ ಭಾಗವನ್ನಾಗಿಸಿದ ಮಾತ್ರ ಪರಿವರ್ತನೆ ಸಾಧ್ಯ. ನನ್ನ ಬಳಿ ಐದು ಸಾವಿರ ಖೈದಿಗಳ ಇತಿಹಾಸವಿದೆ. ತಾರತಮ್ಯವಾದ ವ್ಯವಸ್ಥೆಗಳು ಇರುವವರೆಗೆ ಅಪರಾಧಗಳನ್ನು ತಡೆಯಲು ಸಾಧ್ಯವಿಲ್ಲ. ಈ ಮಾತುಗಳು ನನ್ನ ಜೀವನದ ಅನುಭವದ ಮಾತುಗಳು. ನನ್ನ ಬದುಕನ್ನೇ ಪರಿವರ್ತನೆಗೊಳಿಸಿದ ರಂಗಭೂಮಿಯೇ ನನ್ನ ಜೀವಾಳ. ರಂಗಭೂಮಿಯ ಹಿನ್ನೆಲೆ ಇದ್ದಲ್ಲಿ ಪ್ರತಿಯೊಬ್ಬನ ಬದುಕು ಅರ್ಥಪೂರ್ಣವಾಗುತ್ತದೆ ಎನ್ನುವಾಗ ಅನ್ಬುರಾಜ್ ಅವರ ಮುಖದಲ್ಲಿ ಸಾರ್ಥಕತೆಯ, ಧನ್ಯತೆಯ ಭಾವವಿತ್ತು. ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದವರು ಅನ್ಬುರಾಜ್ ಅವರ ಹೊಸ ಭಾವ ಪ್ರಪಂಚದಲ್ಲಿ ಮೂಕರಾಗಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಕು. ಅನಘಾ, ಕು. ಅಮೋಘಾ, ಸಂತೋಷ್ ಉಪಾಧ್ಯಾಯ ಅವರ ಸುಶ್ರಾವ್ಯ ರಂಗಗೀತೆ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಹಿನ್ನೆಲೆಯಾಗಿತ್ತು. ಡಾ. ಎಸ್. ಎಲ್. ಭಂಡಾರಕರ್ ಅವರ ಸಂದರ್ಭೋಚಿತ ಪ್ರಶ್ನಾವಳಿಗಳು ಪ್ರೇಕ್ಷಕರನ್ನು ಮತ್ತಷ್ಟು ಆಸಕ್ತರನ್ನಾಗಿಸಿತು. ತಾಂತ್ರಿಕ ನಿರ್ವಹಣೆಯಲ್ಲಿ ಟಿ. ಎಸ್. ರಮೇಶ್ ಅವರು ಸಹಕರಿಸಿದರು ರಂಗಕರ್ಮಿ, ದಿನಕರ ಫೌಂಡೇಶನ್, ನವದೆಹಲಿ ಸಂಚಾಲಕ ಶಿವಾನಂದ ಇಂಗಳೇಶ್ವರ ಅವರು ಇಂತಹ ವೈಶಿಷ್ಟ್ಯಪೂರ್ಣ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. 'ದಿನಕರ' ರಂಗಾಸಕ್ತರ ಅರ್ಥಪೂರ್ಣ ವೇದಿಕೆ ಎಂಬುದನ್ನು ಈ ಕಾರ್ಯಕ್ರಮ ಮತ್ತೊಮ್ಮೆ ಸಾಬೀತುಪಡಿಸಿತು.

**ಅರವಿಂದ ಬಿಜೈ**

# ಜಾನಪದ ಅಂಶಗಳು ರಂಗಭೂಮಿಯ ಮೇಲೆ ಪ್ರಭಾವ ಬೀರಿದೆ

## –ಡಾ. ಎಂ. ಭೈರೇಗೌಡ

ವಿದೂಷಕ, ನಿರೂಪಕರ ಕಾರ್ಯ ಜಾನಪದ ಮಾಡುತ್ತದೆ. ಅದಕ್ಕೆ ಬೇಕಾದಂತಹ ಸಂಗೀತ ಜಾನಪದ ಕಟ್ಟಿಕೊಡುತ್ತದೆ. ವೇಷಭೂಷಣ, ಮುಖವರ್ಣಿಕೆಯನ್ನು ಬುಡಕಟ್ಟು ಲೋಕ ಕೊಡುತ್ತದೆ. ವೇಷಭೂಷಣ ಬುಡಕಟ್ಟು ಸಂಸ್ಕೃತಿಯ ಪರಿಕಲ್ಪನೆ. ಪ್ರಾಣಿಗಳಿಂದ, ತಮ್ಮ ಸುತ್ತ-ಮುತ್ತಲೂ ಒದಗಿಬರಬಹುದಾದಂತಹ ತೊಂದರೆಗಳಿಂದ ಹಾಗೂ ಅಡಚಣೆಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ಬುಡಕಟ್ಟು ಸಮುದಾಯ ಮುಖವರ್ಣಿಕೆಯನ್ನು ಬದಲಾಯಿಸಿಕೊಳ್ಳುತ್ತದೆ. ಇದು ಪ್ರಸಾದನ ಕಲೆಗೆ ಮೂಲ ಧಾತು. ಯಾವುದೇ ನಾಟಕವನ್ನು ಅದರ ಓಘವನ್ನು ಒಂದಕ್ಕೊಂದು ಕೊಂಡಿಯಾಗಿಸುವುದು ನಿರೂಪಕನ ಕಾರ್ಯವಾಗಿದೆ. ಬುಡಕಟ್ಟು ಸಮುದಾಯದ ಆಚರಣೆಗಳು, ನಂಬಿಕೆಗಳು, ಅವರ ರೀತಿ-ನೀತಿಗಳು ಅವರ ವೇಷಭೂಷಣಗಳು ಇವೆಲ್ಲವೂ ಸಹಕಾರಿಯಾಗುತ್ತವೆ ಎಂದು ಜಾನಪದ ವಿದ್ವಾಂಸ, ನಾಟಕಕಾರ ಹಾಗೂ ರಂಗಕರ್ಮಿ ಡಾ.ಎಂ. ಭೈರೇಗೌಡ ಅವರು ಹೇಳಿದರು.ಅವರು ನವದೆಹಲಿಯ ದಿನಕರ ತಂಡ ಇತ್ತೀಚಿಗೆ ಆಯೋಜಿಸಿದ್ದ 'ರಂಗಭೂಮಿ ಹಾಗೂ ಬುಡಕಟ್ಟು ಸಂಸ್ಕೃತಿ' ಕುರಿತ ಅಂತರ್ಜಾಲ ಮೂಲಕ ನಡೆದ ಸಂವಾದದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಬುಡಕಟ್ಟು ಲೋಕದ ಕುರಿತಾಗಿ ಅಧ್ಯಯನಶೀಲ ಹಾಗೂ ಕ್ಷೇತ್ರಕಾರ್ಯದ ತಮ್ಮ ಅನುಭವದ ವಿದ್ವತ್ಪೂರ್ಣ ವಿಚಾರಗಳನ್ನು ಹಂಚಿಕೊಂಡರು.

ರಂಗಭೂಮಿಗೆ ಬೇಕಾದ ವಾದ್ಯ ಪರಿಕರಗಳು, ಸಂಗೀತ, ವೇಷಭೂಷಣ ಇವುಗಳೆಲ್ಲದರ ಬಳಕೆಯಿಂದ ಅದ್ಭುತವಾದುದ್ದನ್ನು ಸೃಷ್ಟಿಸಿಕೊಡಲು ಸಾಧ್ಯವಾಗಿದೆ. ಇದಕ್ಕೆ ಪ್ರೇರಕ ಹಾಗೂ ಪೂರಕವಾದ ಅಂಶಗಳನ್ನು ಬುಡಕಟ್ಟು ಲೋಕ ಕೊಡಮಾಡಿದೆ ಎಂದರು. ಸುರುಡು ಮುನ್ನೂರು ಕೋಟಿ ದೇವ ದಂಡು ನಡದೈತೆ... ಇದನ್ನು ಹೇಳುವಾಗ ಇಡೀ ಊರಿನ ಜನ ಒಂದೆಡೆ ಸೇರುತ್ತಾರೆ. ಏನೋ ಹೇಳಲು ಹೊರಟವನಿಗೆ ಆ ಕಾಲದ ಆ ಭಾಗದ ಜನರು ಧಿಕ್ಕರಿಸಿ ಹೋಗುತ್ತಾರೆ. ನೋವುಗಳನ್ನೆಲ್ಲಾ ಅವನು ತೋಡಿಕೊಳ್ತಾನೆ. ಇದೇ ಗೀತೆಯ ಸಾಲುಗಳನ್ನು 'ಮಲೆಗಳಲ್ಲಿ ಮದುಮಗಳು' ನಾಟಕದ ಒಂದು ಸಂದರ್ಭದಲ್ಲಿ ಬಳಸಿಕೊಂಡಿರುವುದರ ಕುರಿತು, ಬಸವಲಿಂಗಯ್ಯ ಅವರು ಬಹು ಚೆಂದಾಗಿ ಈ ಸಾಲುಗಳನ್ನು ಬಳಸಿದ್ದಾರೆ ಎಂದು ಹೇಳಿದರು.

ಬುಡಕಟ್ಟು ಅಥವಾ ಜಾನಪದ ಅಂಶಗಳನ್ನು ಅವಶ್ಯವಿರುವಷ್ಟನ್ನು ಸಮ್ಮಿಳಿತಗೊಳಿಸಿ ಅದ್ಭುತವಾದ ಕಲಾಕೃತಿ ರಂಗದ ಮೇಲೆ ತರಲು ಬುಡಕಟ್ಟು ಹಾಗೂ ಜಾನಪದ ಲೋಕ ಸಹಾಯ ಮಾಡುತ್ತಿದೆ ಎಂದು ಹೇಳಿದರು.

ಬುಡಕಟ್ಟು ಜನರ ಕಥೆಗಳ ಆಧಾರದ ಮೇಲೆ ಮಕ್ಕಳ ನಾಟಕಗಳನ್ನು ತಾವು ರಚಿಸಿರುವುದಾಗಿ ಹೇಳಿದರು. ಬುಡಬೆಳ್ಳಿ ನಡುಪಚ್ಚೆ ಗುನೆಮುತ್ತು ಇದು ಮಕ್ಕಳಿಗೋಸ್ಕರ ಬರೆದ ನಾಟಕವಿದು. ಬುಡಬೆಳ್ಳಿ ನಡುಪಚ್ಚೆ ಗುನೆಮುತ್ತು ಅರ್ಥ ಕ್ರಮವಾಗಿ ಬೇರು, ಹಸಿರು ಹಾಗೂ ಹಣ್ಣು ಮತ್ತೆ ಮೂರು ಜನ ಹೆಣ್ಣು ಮಕ್ಕಳು ಆ ಎರಡನ್ನು ಸಂವಾದಿಯಾಗಿ ಮಾಡಿಕೊಂಡು ನಾಟಕ ರಚನೆ ಮಾಡಲಾಗಿದೆ ಎಂದರು.

ಕಥೆಗಾರನ ಹುಡುಕ ಹೊರಟವನೇ ಕಥೆ ಹೇಳಿದ: ಸುಮಾರು 56 ಗಂಟೆ ನಿರಂತರ ಹಾಡುವ, ಒಂಭತ್ತು ರಾತ್ರಿಯವರೆಗೆ ನಿರಂತರವಾಗಿ ಕಥನ ಕಾವ್ಯಗಳನ್ನು ಹಾಡುವ ಓರ್ವ ಕಲಾವಿದ ಈರುಳಿಗರಲ್ಲಿದ್ದ. ಯಾವುದೋ ಒಂದು ಕಾಡಿನ ಕಿಬ್ಬಿಯೊಳಗ ವಾಸ. 70 ವಯಸ್ಸಿನ ಗುಡ್ಡಯ್ಯ ತಮ್ಮನ್ನು ಕಲಾವಿದನಿರುವಲ್ಲಿಗೆ ಕರೆದುಕೊಂಡು ಹೋಗುತ್ತೇನೆಂದೂ ನಡೆದ, ಮಧ್ಯದಲ್ಲಿ ದಾರಿತಪ್ಪಿದ. ಹೋಗುವ ದಾರಿಯೇ ಸಿಗಲಿಲ್ಲ. ಕೊನೆಗೆ ಒಂದು ಆಲದ ಗಿಡದ ಕೆಳಗೆ ಕುಳಿತ ಆತ ಮಲಗಬಾರದೆಂದು ಎಂದು ಎಚ್ಚರಿಸಿದ, ಕಥೆ ಹೇಳಲು ಒತ್ತಾಯಿಸಿದಾಗ ಬೆಳಗಿನ ಜಾವದವರೆಗೆ ಆತ ಆರು ಕಥೆ ಹೇಳಿದ.ಈ ಕಥೆಗಳನ್ನು ನಾಟಕಕ್ಕೆ ರೂಪಾಂತರಿಗೊಳಿಸಿದೆ ಎಂದು ಭೈರೇಗೌಡ ಹೇಳಿದರು.

ಭೂತಾನ್, ದುಬೈ, ಶ್ರೀಲಂಕಾ ಸೇರಿದಂತೆ ಬೇರೆ-ಬೇರೆ ದೇಶಗಳಲ್ಲಿ ಯಶಸ್ವಿ ಪ್ರದರ್ಶನ ಕಂಡ 2000ರಲ್ಲಿ ರಚನೆಯಾದ 'ಸೋರೆಬುರುಡೆ' ಗೀತ ರೂಪ ನಾಟಕಕ್ಕೆ ಬಳಸಿರುವ ಖಣಿಗಾರನ ಶಬ್ದ ಮಾಧುರ್ಯ ರೀತಿ ತಮ್ಮದೇಯಾದ ಸಾಹಿತ್ಯದೊಂದಿಗೆ ಬಳಕೆ ಮಾಡಲು ಸಾಧ್ಯವಾಯಿತು. ಸೃಷ್ಟಿ ಪುರಾಣದ ಕಥೆಯೇ 'ಸೋರೆಬುರುಡೆ' ನಾಟಕದ ವಿಷಯ ವಸ್ತು ಎಂದವರು ಹೇಳಿದರು.



ಡಾ. ಎಂ. ಭೈರೇಗೌಡ

ಒಂಭತ್ತು ನಿರ್ದೇಶಕರು, ಒಂಭತ್ತು ರೀತಿಯಲ್ಲಿ ಈ ನಾಟಕಕ್ಕೆ ನಿರ್ದೇಶನ ಮಾಡಿದ್ದಾರೆ 'ಸೋರೆಬುರುಡೆ'ಯ ಭೈರೇಗೌಡ ಅನ್ನುವಷ್ಟರ ಮಟ್ಟಿಗೆ ಈ ನಾಟಕ ಜನಜನಿತವಾಯಿತು ಎಂದರು. ಇರುಳಿಗರು ಜಾನಪದ ಒಂದು ಅಧ್ಯಯನ ವಿಷಯದ ಕುರಿತ ಪ್ರಬಂಧ ಮಂಡನೆಗೆ ಪಿಎಚ್‌ಡಿ ಪದವಿ ದೊರೆತಿದೆ. 1996ರಲ್ಲಿ ಹಾಸನದಲ್ಲಿ ನಡೆದ ಅಖಿಲ ಭಾರತ 65ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಗತಿ ಪಥದಲ್ಲಿ ಬುಡಕಟ್ಟು ಜನಾಂಗ ಹಾಲಕ್ಕಿ ಮತ್ತು ಸಿದ್ದಿ ವಿಷಯದ ಕುರಿತು ವಿಷಯ ಮಂಡಿಸಿದ್ದಾರೆ.

ಈ ಕಾರ್ಯಕ್ರಮದ ಪರಿಕಲ್ಪನೆ ರೂಪಿಸಿ ಸಂಯೋಜನೆ ಮಾಡಿರುವ ದೆಹಲಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಸಂವಾದವನ್ನು ಬಹು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋದರು. ಟಿ.ಎಸ್. ರಮೇಶ್ ತಾಂತ್ರಿಕ ನೆರವು ಒದಗಿಸಿದರು. ಸಂತೋಷ ಕುಮಾರ್ ಉಪಾಧ್ಯಾಯ ಅವರು ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ಶ್ರಮಿಸಿದರು. ಎಸ್. ಕುಮಾರ್ ವಂದಿಸಿದರು.

ಪ್ರಸಿದ್ಧ ಗಾಯಕ ರಾಜಪ್ಪ ಕೋಲಾರ ಹಾಗೂ ಜನಪದರು ತಂಡದ ಕಲಾವಿದರಿಂದ ಸುಮಧುರ ಗಾಯನ ಪ್ರೇಕ್ಷಕರ ಮೆಚ್ಚುಗೆ ಪಡೆಯಿತು.

**ಅಮರೇಶ್**

# "ವಚನದ ಸಪ್ತ ಸ್ವರಗಳು ವಿಶ್ವಕ್ಕೆ ಮಾದರಿ"

## – ಡಾ. ಗೊ.ರು. ಚನ್ನಬಸಪ್ಪ



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ದೆಹಲಿ ಘಟಕದ ವತಿಯಿಂದ ಮೈಸೂರು ಜಿಲ್ಲೆಯ ಜಗತ್ಪ್ರಸಿದ್ಧ ಸುತ್ತೂರು ಮಠದ ಲಿಂಗೈಕ್ಯ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇಯ ಜನ್ಮದಿನದ ಅಂಗವಾಗಿ ದಿನಾಂಕ 29.08.2021 ರಂದು "ಶರಣ ಸಂಸ್ಕೃತಿ, ಸಾಹಿತ್ಯ ಮತ್ತು ಪ್ರಸಾರ" ಆನ್‌ಲೈನ್ ದತ್ತಿ ಉಪನ್ಯಾಸ ನಡೆಯಿತು.

ಮಾಲಿಕೆ-09 ನ್ನು ಉದ್ದೇಶಿಸಿ ತಮ್ಮ ವಿಚಾರ ಮಂಡಿಸಿದ ಹಿರಿಯ ಸಾಹಿತಿ, ಚಿಂತಕ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕೇಂದ್ರ ಘಟಕದ ಅಧ್ಯಕ್ಷ ಡಾ. ಗೊ.ರು. ಚನ್ನಬಸಪ್ಪನವರು ತಮ್ಮ ವಿಚಾರಗಳನ್ನು ಹಂಚಿಕೊಂಡರು. ಅವರು 'ಕಾಲದ ಸಾಲವನ್ನು ತೀರಿಸಲು ನಮಗೆ ಯಾವತ್ತಿಗೂ ಸಾಧ್ಯವಿಲ್ಲ.' ಇಲ್ಲಿಯವರೆಗೂ ಈ ದಿನವನ್ನು 'ವಚನ ದಿನ'ವೆಂದು ಆಚರಿಸುತ್ತಾ ಬರುತ್ತಿದ್ದೆವು ಆದರೆ ಕನ್ನಡ ಸಾಹಿತ್ಯ ಲೋಕದಲ್ಲಿ 'ಫ.ಗು. ಹಳಕಟ್ಟಿ'ಯವರನ್ನು ಆಧುನಿಕ ವಚನ ಸಾಹಿತ್ಯದ ಪಿತಾಮಹ ಎಂದು ಕರೆಯಲಾಗುವುದರಿಂದ ಅದಕ್ಕೆ ಪರ್ಯಾಯವಾಗಿ ಶ್ರೀಗಳ ಜನ್ಮದಿನವಾದ ಆಗಸ್ಟ್ 29ರ ದಿನವನ್ನು ಪರಿಷತ್ತಿನ ವತಿಯಿಂದ ಸಂಸ್ಥಾಪಕರ ದಿನವೆಂದು ಇನ್ನು ಮುಂದೆ ಆಚರಿಸಲಾಗುವುದು ಎಂದು ಹೇಳಿದರು. ನಾವು ಈ ಭೂಮಿಯ ಮೇಲೆ ಬದುಕಿನ ಜೊತೆಗೆ ಎಷ್ಟೊಂದು ನಮ್ಮನ್ನು ನಾವು ತೊಡಗಿಸಿಕೊಂಡಿದ್ದೇವೆ ಎಂದರೆ ಈ ಬದುಕಿನ ಮಧ್ಯೆ ಆ ದೇವರು ಮತ್ತು ಸ್ವರ್ಗಗಳ ಬಗ್ಗೆಯೂ ಸಹ ಯೋಚಿಸಲು ನಮ್ಮ ಬಳಿ ಸಮಯವಿಲ್ಲದಂತಾಗಿದೆ. ಇದರ ಮಧ್ಯೆಯೇ ಶರಣರು ಎಂದರೆ ಹೇಗಿರಬೇಕು ಎಂಬುದಕ್ಕೆ ಉತ್ತಮ ನಿದರ್ಶನವಾಗಿ ಶಿವಮಹಾಂತ ಶಿವರಾತ್ರಿ ಮಹಾಸ್ವಾಮಿಗಳು ತೋರಿಸಿ ಕೊಟ್ಟಿದ್ದಾರೆ. ಕಾಯಕ, ದಾಸೋಹ ಮತ್ತು ಶಿಕ್ಷಣದ ಹಿನ್ನೆಲೆಯಿಂದ ಸುತ್ತೂರಿಗೆ ಸಾವಿರ ವರ್ಷಗಳ ಇತಿಹಾಸವಿದೆ. ಆದರೆ ಇದನ್ನು ಇನ್ನೂ ಮೇಲಕ್ಕೆ ಏರಿಸಿದವರು ಶ್ರೀ ಶಿವರಾತ್ರಿ ಮಹಾಸ್ವಾಮೀಜಿಗಳು. ದೊಡ್ಡ ದೊಡ್ಡ ನಿಘಂಟುಗಳಲ್ಲಿ ಮಠಗಳು ಎಂದರೆ ಶಿಕ್ಷಣ, ಅನ್ನ ಮತ್ತು ಸಮಾನತೆಯನ್ನು ಒಂದಾಗಿಸುವ ತಾಣಗಳು ಎಂಬ ಅರ್ಥವಿದೆ. ಈ ಪದಗಳು ಹುಟ್ಟಿದ್ದು ಸುತ್ತೂರು, ತುಮಕೂರಿನಂತಹ ಮಠಗಳ ಈ ಸೇವಾ ವಾತಾವರಣವನ್ನು ನೋಡಿಯೇ ಎಂದೆನ್ನಿಸುತ್ತದೆ. ಚೋಳರ ದೊರೆ ಗಂಗರ ಮೇಲೆ ದಂಡೆತ್ತಿ ಬಂದಾಗ ರಾಜೇಂದ್ರ ಸ್ವಾಮೀಜಿಗಳು ಇಬ್ಬರೂ ರಾಜರಿಗೆ ಯುದ್ಧದ ಹೊರತಾಗಿ ಸ್ನೇಹ ಮತ್ತು ಮಮತೆಯನ್ನು ಮೂಡಿಸಿದವರು. ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಗಳ ಕಾಲ ಖಂಡದಲ್ಲಿ ಸುತ್ತೂರು ಮಠದ ಸೇವೆ ದೂರದ ದೆಹಲಿ, ದುಬೈ, ಅಮೆರಿಕಾ ದೇಶಗಳವರೆಗೂ ಹಬ್ಬಿದೆ. ಮಠದ 335 ಕೇಂದ್ರಗಳಿದ್ದು 80 ಸಾವಿರಕ್ಕು ಅಧಿಕ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ, 20 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯ, ಐದು ಸಾವಿರಕ್ಕೂ ಅಧಿಕ ದೀನ – ದಲಿತ ಬಡ ಮಕ್ಕಳಿಗೆ ಮಠದ ವತಿಯಿಂದ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯ ನೀಡಲಾಗಿದೆ. ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ 123 ಘನಲಿಂಗ ಸ್ವಾಮೀಜಿಗಳ ವಚನಗಳನ್ನು ಶಿವರಾತ್ರಿ ಸ್ವಾಮೀಜಿಗಳು ಮುದ್ರಿಸಿ ಪ್ರಕಟಣೆ ಮಾಡಿದ್ದಾರೆ. ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಜಯ ರಚನೆಗಳಿಂದ ಶ್ರೀ ಮಠದ ಸಾಹಿತ್ಯಿಕ ಬೆಳವಣಿಗೆಗೆ ಪೂರಕವಾಗಿದೆ.

ಹಳ್ಳಿ ಹಳ್ಳಿಗೆ ಹೋಗಿ ಭಿಕ್ಷಾ ಜೋಳಿಗೆ ಹಿಡಿದು ತಂದ ಪ್ರಸಾದದಿಂದ ಮಕ್ಕಳನ್ನು ಓದಿಸಿದ ಮಠ, ಇಂದು ಈ ಮಟ್ಟಕ್ಕೆ ಬೆಳೆದು ನಿಂತಿದೆ. ನೋವಿನಲ್ಲಿಯೂ ಸಹ ಗೆಲುವು ಕಂಡಿದ್ದು ಸುತ್ತೂರು ಶ್ರೀಮಠ. ಇದಕ್ಕೆ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಪಾತ್ರ ಬಹಳ ದೊಡ್ಡದಾಗಿದೆ. ಸುತ್ತೂರು ಮಠ 515 ಅಂಕಣದ ಬೃಹತ್ ಮಠವಾಗಿತ್ತು, 800 ಕ್ಕೂ ಹೆಚ್ಚು ಹಳ್ಳಿಗಳಲ್ಲಿ 77 ಕ್ಕೂ ಅಧಿಕ ಮಠದ ಕೇಂದ್ರಗಳಿದ್ದವು, ಶ್ರೀಮಠವು ಮಾಡಿದ ಶಾಲೆ ಮತ್ತು ಶಿಕ್ಷಣದ ಉಳಿವಿಗಾಗಿ, ರಾಜ ಮಹಾರಾಜರೊಂದಿಗೆ ಹೋರಾಡಿ ಶಾಂತಿ ಜನಮನ್ನಣೆಯನ್ನು ಗಳಿಸಿದ ಇತಿಹಾಸವನ್ನು ಕೂಡ ಹೊಂದಿದೆ.

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಮೈಸೂರು ಮಹಾರಾಜರಿಂದ 'ರಾಜಗುರುತಿಲಕ' ಎಂಬ ಬಿರುದನ್ನು ಪಡೆದ ಮಹಾನ್ ತತ್ವಜ್ಞಾನಿಯಾಗಿದ್ದರು. ಈ ಎಲ್ಲ

ಯೋಜನೆಗಳು ಮತ್ತು ತತ್ವಾದರ್ಶಗಳ ಮೇಲೆ ಹನ್ನೆರಡನೇಯ ಶತಮಾನದ ವಚನಕಾರರ ಸಂದೇಶಗಳನ್ನು ಸಮಕಾಲೀನ ಮಾನವ ಸಮಾಜಕ್ಕೆ ನೀಡಬೇಕೆಂಬ ಉದ್ದೇಶದಿಂದ 29-08-1981 ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು ಸ್ಥಾಪನೆ ಮಾಡಲಾಯಿತು ಎಂದು ಕುಲಂಕುಶವಾಗಿ ಪರಿಷತ್ತು, ಸುತ್ತೂರು ಮಠದ ಪರಂಪರೆ, ವೈಭವ ಮತ್ತು ಸೇವೆಗಳ ಬಗ್ಗೆ ಗೊ.ರು. ಚನ್ನಬಸಪ್ಪನವರು ತಿಳಿಸಿದರು. ಗ್ರಾಮ ಭಾರತ ಪರಿಕಲ್ಪನೆಯನ್ನು ನೆನಪಿಸಿ ದೂರದ ನಗರ, ಪಟ್ಟಣ, ದೇಶ, ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬರಿಗೂ ತಮ್ಮ ಹುಟ್ಟಿದ ಹಳ್ಳಿಗಳ ಬಗ್ಗೆ ಅರಿವಿರಬೇಕು, ಅವುಗಳ ಏಳಿಗೆಗಾಗಿ ಸೇವೆ ಸಲ್ಲಿಸಬೇಕು ಎಂದರು. ಈ ಸಂದರ್ಭದಲ್ಲಿ ತಮ್ಮ 20 ವರ್ಷಕ್ಕೂ ಹೆಚ್ಚು ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಕ್ಕೆ ಮತ್ತು ಅವರ ಸಮಾಜ ಸೇವೆಯನ್ನು ಪರಿಗಣಿಸಿ ನೀಡಿದ ಶ್ರೀ ರಾಮಕೃಷ್ಣ ಹೆಗಡೆ ಪ್ರಶಸ್ತಿಯನ್ನು ಪಡೆದುದಕ್ಕಾಗಿ ಅಭಿನಂದನೆ ಸಲ್ಲಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಮುಖ್ಯ ಅತಿಥಿ ರಕ್ಷಣಾ ಇಲಾಖೆಯ 'ಡಿ ಜಿ ಕ್ಯೂ ಎ' ವಿಭಾಗದ ನಿರ್ದೇಶಕ ಅನಂತರಾಮ ಅರಳಯವರು ಮಾತನಾಡಿ ಐ.ಎ.ಎಸ್. ನಂತಹ ದೊಡ್ಡ ದೊಡ್ಡ ಪರೀಕ್ಷೆಗಳನ್ನು ಉತ್ತೀರ್ಣರಾಗಲು, ವೈದ್ಯಕೀಯ ಕ್ಷೇತ್ರಗಳಂತಹ ದೊಡ್ಡ ದೊಡ್ಡ ಪದವಿಗಳ ಹೊರತಾಗಿ ಭಾಷೆಯ ಮೇಲಿನ ಪ್ರೇಮ ಮತ್ತು ಹಿಡಿತ ಅವಶ್ಯಕವಿದೆ ಎಂದು ನಿದರ್ಶನದ ಮೂಲಕ ಮಾತನಾಡಿ, ನಮ್ಮ ಕನ್ನಡ ಸಂಸ್ಕೃತಿಯಲ್ಲಿ ವಚನಸಾಹಿತ್ಯ "ಕಾಯಕವೇ ಕೈಲಾಸ" ಎಂಬ ತತ್ವದಡಿಯಲ್ಲಿ ಅಷ್ಟೊಂದು ಶ್ರೀಮಂತಿಕೆ ಮತ್ತು ಬಲವನ್ನು ಜನರಲ್ಲಿ ಮೂಡಿಸಿದೆ ಎಂದರು. ಸುತ್ತೂರು ಸ್ವಾಮೀಜಿಗಳು ಬೆಳೆದಿದ್ದು ಬಹಳ ಆಳವಾಗಿ ಮತ್ತು ವಿಶಾಲವಾಗಿ ಆ ಮಟ್ಟಕ್ಕೆ ಬೆಳೆಯಲು ನಮಗೆ ಸಾಧ್ಯವಿಲ್ಲ. ಬೆಟ್ಟದ ಮೇಲೊಂದು ಮನೆಯ ಮಾಡಿ ಯಾವುದೇ ಕಾರಣಕ್ಕೂ ಅಂಜಬಾರದು, ಹಾಗೆಯೇ ಹಾಕಿಕೊಂಡ ಗುರಿ ಸಾಧಿಸಲು ಪ್ರಯತ್ನಪಡಲೇಬೇಕು. "Success can be delay but can not be denied" ಎಂದು ಕಾರ್ಯಕ್ರಮವನ್ನುದ್ದೇಶಿಸಿ ಸ್ಫೂರ್ತಿಯ ಸಂದೇಶಗಳನ್ನು ನೀಡಿದರು.

ಕೊಯಮತ್ತೂರಿನಿಂದ ಭಾಗವಹಿಸಿದ್ದ ಭಾರತೀಯ ವಾಯುಸೇನಾ ವಿಭಾಗದ ವಿಂಗ್ ಕಮಾಂಡರ್ ಅಧಿಕಾರಿ ಮಿಂಜೂರು ಎಂ. ಯಜ್ಞರಾಮನ್ ಅವರು ಕನ್ನಡ ವಚನ ಸಾಹಿತ್ಯದ ಮೇಲಿನ ಪ್ರೇಮದಿಂದ ಇಂಪಾಗಿ ಕೊಳಲು ನುಡಿಸುವ ಮೂಲಕ ವಚನಗಾಯನ ಮಾಡಿ ರಂಜಿಸಿ, ವಚನಗಳ ಬಗೆಗೆ ತಮ್ಮ ಪಾಂಡಿತ್ಯ ಮತ್ತು ಆಸಕ್ತಿಯನ್ನು ವ್ಯಕ್ತಪಡಿಸಿದರು.

ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷ ಎನ್.ಪಿ. ಚಂದ್ರಶೇಖರ್ ಅವರು ಕಾರ್ಯಕ್ರಮ ಯಶಸ್ವಿಯಾಗಿ ನಡೆದು ಬಂದಿದ್ದಕ್ಕೆ ಹರ್ಷ ವ್ಯಕ್ತಪಡಿಸಿದರು. ಶರಣ ಸಾಹಿತ್ಯವನ್ನು ಮುಂದಿನ ಜನಾಂಗಕ್ಕೆ ಮುಟ್ಟಿಸುವ ಉದ್ದೇಶದಿಂದ ಪರಿಷತ್ತು ಕೆಲಸ ಮಾಡುತ್ತಿದೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕೇಂದ್ರ ಘಟಕದ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಅಪ್ಪಾಜಿ ಅವರು ಹೇಳಿದ ಹಾಗೆ ದೆಹಲಿ ಘಟಕದ ಬೆಳವಣಿಗೆಗೆ ಎಲ್ಲ ಪದಾಧಿಕಾರಿಗಳು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ನಾವೆಲ್ಲರೂ ಹಳ್ಳಿಯಿಂದ ಬಂದವರು, ಈಗ ಈ ಹಳ್ಳಿಗಳ ಭಾವನೆಗಳನ್ನು, ನೆನಪುಗಳನ್ನು ಉಳಿಸಿ ಬೆಳೆಸುವ ಅವಶ್ಯಕವಿದೆ ಎಂದು ಗೊ. ರು. ಚನ್ನಬಸಪ್ಪನವರ ಸಂದೇಶವನ್ನು ಪುನಃ ಮೇಲುಕು ಹಾಕಿದರು.

ಗೊಂಡೇದಹಳ್ಳಿ ಜಗದಾಂಬ ಮತ್ತು ಪಶುವೈದ್ಯ ಲಿಂ. ಶಿವಲಿಂಗಪ್ಪ ದತ್ತಿ ಕಾರ್ಯಕ್ರಮದ 9ನೇ ಆನ್ ಲೈನ್ ಉಪನ್ಯಾಸ ಮಾಲಿಕೆಯಲ್ಲಿ ಭಾಗವಹಿಸಿ ಯಶಸ್ವಿಯಾಗಲು ಸಹಕರಿಸಿದ ಎಲ್ಲ ಗಣ್ಯ ಮಹನೀಯರಿಗೆ ಹಾಗೂ ಶರಣಾಭಿಮಾನಿಗಳನ್ನು ದೆಹಲಿ ಘಟಕದ ಉಪಾಧ್ಯಕ್ಷ ಪ್ರಭು ಪಾಟೀಲ್ ಸ್ವಾಗತಿಸಿದರು, ಸದಸ್ಯ ರಾಜಕುಮಾರ್ ನೀಲೂರ ವಂದಿಸಿದರು.

ಸದಸ್ಯರಾದ ಕದಳಿಮಹಿಳಾ ವೇದಿಕೆ ಪದಾಧಿಕಾರಿಗಳಾದ ಶ್ರೀಮತಿ ಸುಜಾತ ನಿಂಬಾಳ್ ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರೆ, ಶ್ರೀಮತಿ ಜಯಶ್ರೀ ಬಸವರಾಜ್, ಶ್ರೀಮತಿ ಮೈಥಿಲಿ ಅತ್ತಾವರ್ ಮತ್ತು ಪರಿಷತ್ತಿನ ಕಾರ್ಯದರ್ಶಿ ಕೆ.ಎಸ್. ಮೂರ್ತಿ ಅವರು ಅತಿಥಿ ಗಣ್ಯರನ್ನು ಪರಿಚಯಿಸಿದರು.

ಕಾರ್ಯಕ್ರಮಕ್ಕಾಗಿ ದುಡಿದ ಪರಿಷತ್ತಿನ ಪದಾಧಿಕಾರಿಗಳು, ಸಂಘಟನಾಕಾರರು, ತಾಂತ್ರಿಕ ಸಹಾಯ ನೀಡಿದವರನ್ನು ಕಾರ್ಯಕ್ರಮ ನಡೆಸಿಕೊಟ್ಟವರನ್ನು ಶ್ಲಾಘಿಸಿದರು. ಮಾಸ್ಟರ್ ಗಗನ್ ಮತ್ತು ಕುಮಾರಿ ಆರಾಧ್ಯ ಪಾಟೀಲ್ ವಚನ ವಾಚನ ಮಾಡಿದರು.

***ಯಲ್ಲಾಲಿಂಗ ಕೊಪ್ಪದ***




**ನೊಯ್ಡಾದ ಜೆ.ಎಸ್.ಎಸ್ ಸಂಸ್ಥೆಯಲ್ಲಿ ದಿನಾಂಕ 29.08.2021 ರಂದು ಪರಮಪೂಜ್ಯ ಲಿಂಗೈಕ್ಯ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ ಜಯಂತ್ಯುತ್ಸವ ಆಚರಣೆ ಮಾಡಲಾಯಿತು**

# ಗುರುಗಾಂವ್ ಕನ್ನಡ ಸಂಘದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ

ಸತತ ಎರಡು ವರ್ಷಗಳಿಂದ ಕೊರೊನ ಭೀತಿಯಿಂದ ಮನೆಯಲ್ಲೇ ಇದ್ದು ಬೇಸತ್ತಿದ್ದ ಕನ್ನಡಿಗರನ್ನು ಮತ್ತೆ ಒಂದು ಗೂಡಿಸಿದ್ದು ಶ್ರೀ ಸತ್ಯನಾರಾಯಣ ಪೂಜೆ

**ಕಾಪಾಡು ಶ್ರೀ ಸತ್ಯನಾರಾಯಣ**
**ಪಾವನ ಚರಣ ಪನ್ನಗ ಶಯನಾ.....**

ಬಹುಶಃ ಈ ಕನ್ನಡ ಹಾಡು ಕೇಳದ ವ್ಯಕ್ತಿಯು ಇಲ್ಲ. ಈ ಚಿತ್ರವಿಲ್ಲದ ಮನೆ ಇಲ್ಲ.

ಶ್ರೀ ಸತ್ಯನಾರಾಯಣ ಪೂಜೆ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಮಾಡುವ ಪೂಜೆ ಅದರಲ್ಲಿ ನಮ್ಮ ಕರ್ನಾಟಕದಲ್ಲಿ ಅತಿ ಹೆಚ್ಚಾಗಿ ಗೃಹ ಪ್ರವೇಶವಿರಲಿ, ಹೊಸದಾಗಿ ಮದುವೆಯಾದ ಮನೆಯಿರಲಿ ಅಥವಾ ಯಾವುದೆ ಶುಭಕಾರ್ಯಗಳಿರಲಿ ಅಲ್ಲಿ ಸತ್ಯನಾರಯಣ ದೇವರ ಪೂಜೆ ನಡೆಯುತ್ತದೆ ಶ್ರೀ ದೇವರ ಕಥಾಕಾಲಕ್ಷೆಪವು ನಡೆಯುತ್ತದೆ, ಶ್ರೀಸತ್ಯಾನಾರಾಯಣ ಪೂಜೆ ಮತ್ತು ಕಥಾಕಾಲಕ್ಷೇಪ. ಕಲಿಯುಗದಲ್ಲಿ ಜಗತ್ ಪಾಲಕನಾದ ಶ್ರೀಮನ್ನಾರಯಣನ ಈ ಮಹತ್ತರ ಪೂಜೆ ಮಾಡಿದರೆ ಅದು ಸಕಲ ಸರ್ವಮಂಗಳವನ್ನು ಎಲ್ಲ ದೇವರ ಪೂಜೆಯನ್ನು ನೀಡುವ ಫಲವನ್ನು ನೀಡುತ್ತದೆ ಎಂಬ ನಂಬಿಕೆ ಹಿಂದುಗಳಲ್ಲಿ ಆಳವಾಗಿ ಬೇರೂರಿದೆ, ಹಾಗೆನೆ ಈ ಕಾರ್ಯಕ್ಕೆ ಕರೆ ಬಂದರೆ ಅದರಲ್ಲಿ ಭಾಗವಹಿಸಲೆಬೇಕು ಮತ್ತು ಪ್ರಸಾದ ಸ್ವೀಕರಿಸದೆ ಹೋದರೆ ಅನಿಷ್ಟವಾಗುವುದು ಎಂದೂ ನಂಬಿಕೆಯು ಇದೆ.

ಇಂದು ಇದು ಕೇವಲ ಮನೆಗಳಲ್ಲೆ ಅಲ್ಲದೆ ಸಾರ್ವಜನಿಕವಾಗಿಯು ಇದು ನಡೆಸಲು ಪಡುತ್ತದೆ. ತಾಯಿ ನಾಡಿನ ಸಂಸ್ಕೃತಿಗೆ ಧಕ್ಕೆ ಅಗದಂತೆ ಕಳೆದ 15 ವರ್ಷಗಳಿಂದ ಹರಿಯಾಣ ರಾಜ್ಯದ ಗುರುಗಾಂವ್ ನಗರದಲ್ಲಿ ಗುರುಗಾಂವ್ ಕನ್ನಡ ಸಂಘದ ವತಿಯಿಂದ ಸುಮಾರು 250 ಕನ್ನಡಿಗರ ಸಮಕ್ಷಮದಲ್ಲಿ ಸತ್ಯನಾರಾಯಣ ಪೂಜೇಯನ್ನು ಅತ್ಯಂತ ಭಕ್ತಿಯಿಂದ ದಿನಾಂಕ 15.08.2021 ರಂದು ವೈಶ್ಯ ಸಮಾಜ ಧರ್ಮಶಾಲ ಸೆಕ್ಟರ್ 04 ರಲ್ಲಿ ಆಚರಿಸಲಾಯಿತು.

ಎರಡು ವರ್ಷಗಳ ನಂತರ ನಡೆದ ಪ್ರಥಮ ಸಾರ್ವಜನಿಕ ಪೂಜೆ ಪೂಜೆಗೆ ಜನರು ಬರುತ್ತಾರೆ ಅಥವಾ ಇಲ್ಲ ಎನ್ನುವ ಅತಂಕ ಮಾಡಿದ ಅಡುಗೆ ವ್ಯರ್ಥವಾಗಿ ಹೊಗುತ್ತದೆ ಎನ್ನುವ ಭಯ. ಆದರೆ ಇದು ದೈವ ಪೂಜೆ. ಒಬ್ಬರಾದ ನಂತರ ಒಬ್ಬರು ನಿಧಾನವಾಗಿ ಬಂದರು. ಪೂಜೆಯು ಭಕ್ತಿಯಿಂದ, ಶಾಂತಿಯುತವಾಗಿ ನೆಡೆದಿತ್ತು.

ಪೂಜೆಗೆ ಶ್ರೀ ಮತ್ತು ಶ್ರೀಮತಿ ರಾಜೇಶ್ ದಂಪತಿಗಳು ಕುಳತುಕೊಂಡಿದ್ದರು. ಪೂಜೆ 10:30 ಶುರುವಾಗಿ 12:30 ಮುಗಿಯಿತು.







ನಂತರ ಭೋಜನ ಕಾರ್ಯ ನಡೆಯಿತು.

ದೆಹಲಿ ಕರ್ನಾಟಕ ಸಂಘ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ದೆಹಲಿ ಕನ್ನಡ ಶಾಲೆಯ ಪ್ರಧಾನ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್ ಮತ್ತು ಇನ್ನು ಹಲವಾರು ದೆಹಲಿ ಕನ್ನಡಿಗರು ಪೂಜೆಯಲ್ಲಿ ಭಾಗವಹಿಸಿದ್ದರು.

ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶಾಂತ ಕುಮಾರ್ ನಿಂಬಾಳ ಮತ್ತು ಪ್ರಧಾನ ಕಾರ್ಯದರ್ಶಿ ಸಂತೋಷ ಜೆ ಅವರ ನೇತೃತ್ವದಲ್ಲಿ ಶಿಸ್ತಿನ ಸಿಪಾಯಿಗಳಂತೆ ಕೆಲಸ ಮಾಡಿದ ಗುರುಗಾಂವ್ ಸಂಘದ ಕಾರ್ಯಕರ್ತರು ಹಾಗು ಸ್ವ ಇಚ್ಛೆಯಿಂದ ಕೆಲಸ ಮಾಡಿದ ಎಲ್ಲ ಸದಸ್ಯರು ಅಭಿನಂದನಾರ್ಹರು.

***ಚಂದ್ರಶೇಖರ ಜೋಳದರಾಶಿ***

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-

ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Sep-2021, Vol. No.31, Issue No. 12, Price Rs.1/-
RNI Regn. No. 53405/91, DL-SW-1/4016/19-21
Date of Publication : Sep 8th / 9th, Posting Date : 10th / 11th, Total Pages-16, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

## ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯ



